ಇರತಕ್ಕಂಥಾ ವಾರ್ಡ್‌ಗಳನ್ನು ಹಾಗೆಯೇ ಇಟ್ಟುಕೊಂಡು ಮಾಡುವುದೇ ಅಥವಾ ಆ ವಾರ್ಡ್‌ಗಳನ್ನು ಜಾಸ್ತಿ ಮಾಡಬೇಕೇ ಎನ್ನುವ ಬಗ್ಗೆ ಇನ್ನೂ ಏನು ತೀರ್ಮಾನ ತೆಗೆದುಕೊಂಡಿಲ್ಲಾ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು ಆಲ್ಲಿ ನಾಗರೀಕರು ಈ ಚುನಾವಣೆ ಬಗ್ಗೆ ಉಪವಾಸ ಮಾಡುತ್ತಿದ್ದಾರೆ ಎಂದು. ಆದು ಸರ್ಕಾರದ ಗಮನಕ್ಕೆ ಬಂದಿಲ್ಲ ಎಂದು ಹೇಳುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಒಂದೆ ಈ ಮನೆಯಲ್ಲಿ ಚರ್ಚೆ ಮಾಡಿದಾಗ ಮಾನ್ಯ ಮುಖ್ಯಮಂತ್ರಿಗಳು ಸಹ ಈ ಚುನಾವಣೆಯನ್ನು ಆದಷ್ಟು ಜಾಗ್ರತೆ ಮಾಡುತ್ತೇವೆ ಎನ್ನುವ ಅಂಶವನ್ನು ಈಗಾಗಲೇ ತಿಳಿಸಿದ್ದಾರೆ. ಆದುದರಿಂದ ನಾನೂ ಕೂಡ ಈ ಸಂದರ್ಭದಲ್ಲಿ ಹೇಳುತ್ತೇನೆ ಏನೆಂದರೆ ಮುಂದೆ ಯಾವುದೇ ವಿಧಾನಸಭಾ ಅನುಕೂಲಗಳು ಇದ್ದರೂ ಸಹ ಈ ಕಾರ್ಪೊರೇಷನ್ನಿನ ಚುನಾವಣೆಯನ್ನು ಅಕ್ಟೋಬರ್ ಅಥವಾ ನವೆಂಬರ್ ತಿಂಗಳಲ್ಲಿ ಮಾಡುತ್ತೇವೆ ಎಂದು ಹೇಳುತ್ತೇನೆ.

ಇದನ್ನು ನಾವು ಮುಂದೆ ಯಾವ ರೀತಿಯಿಂದಲೂ ಮುಂದುವರಿಸುವುದಿಲ್ಲ. ತಾವು ಸಹ ಅಲ್ಲಿ ಉಪವಾಸ ಮುಷ್ಕರ ಮಾಡತಕ್ಕಂಥ ನೌಕರರಿಗೆ ಇದನ್ನು ತಿಳಿಸಿ ಅವರು ತಮ್ಮ ಉಪವಾಸವನ್ನು ಅಂತ್ಯಗೊಳಿಸುವಂತೆ ಮಾಡಬೇಕು ಎಂದು ಹೇಳುತ್ತೇನೆ. ಯಾವರೀತಿಯಿಂದಲೂ ಚುನಾವಣೆಗಳನ್ನು ಮುಂದೂಡುವುದಿಲ್ಲ ಎನ್ನುವ ಮಾತನ್ನು ಮಾನ್ಯ ವಿರೋಧಪಕ್ಷದ ನಾಯಕರಿಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಮಂತ್ರಿಗಳು ಹೋಸಪೇಟೆ ಡಿಸೆಂಬರ್ ೧೯೭೮ ರೊಳಗೆ ಹುಬ್ಬಳ್ಳಿ ನಗರಸಭೆಗೆ ಚುನಾವಣೆಗಳನ್ನು ಮಾಡುತ್ತೇವೆಂದು ಮಾತು ಕೊಟ್ಟಿದ್ದರು. ಆದೂ ಮುಂದೆ ಹೋಯಿತು ಈಗ ಮಾನ್ಯಮಂತ್ರಿಗಳು ಅಕ್ಟೋಬರ್ ಅಥವಾ ನವೆಂಬರ್ ತಿಂಗಳೊಳಗಾಗಿ ಎಲ್ಲಾ ಕ್ರಮಗಳನ್ನು ತೆಗೆದುಕೊಂಡು ಚುನಾವಣೆಗಳನ್ನು ಮುಗಿಸಿ, ಚುನಾಯಿತ ಪ್ರತಿನಿಧಿಗಳ ಅಧಿಕಾರಕ್ಕೆ ಬರತಕ್ಕ ವ್ಯವಸ್ಥೆ ಮಾಡುತ್ತೇನೆಂದು ಮಾತು ಕೊಟ್ಟಿದ್ದಾರೆ. ಮಾನ್ಯಮಂತ್ರಿಗಳ ಈ ಮಾತನ್ನು ನಂಬಿ, ಉಪವಾಸ ಮಾಡತಕ್ಕ ನೌಕರರಿಗೆ ಈಮನೆಯ ಮೂಲಕ ತಮ್ಮ ಉಪವಾಸವನ್ನು ಬಿಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್.ಸಿ. ಶ್ರೀಕಂಠಯ್ಯ. —ನಾನೇ ಸಂಬಂಧಪಟ್ಟ ಕಮಿಷನರ್ ಅವರನ್ನು ಕರೆಯಿಸಿ ಚುನಾವಣ ವೇಳಾ ಪಟ್ಟಿಯನ್ನು ನಿಗದಿಮಾಡಿ ಕಳುಹಿಸಿಕೊಡುತ್ತೇನೆ. ಚುನಾವಣೆಗಳನ್ನು ಮಾತ್ರ ಮುಂದೂಡುವುದಿಲ್ಲ.

MR. SPEAKER.—In the light of the state ment given by the Hon Minister for Municipal Administration, I treat this matter as closed.

BUDGET ESTIMATES FOR 1979-80 DEMANDS FOR GRANTS

Demand No. 1, 2, 3, and 33

SRI K.H. RANGANATH (Minister for Agriculture and Parliamentry Affairs)—Sir, on the recommendation of the Governor, I beg to move:

> "That a sum not exceeding Rs 19,56,79,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1980 in respect of Demand No. 1. "Agriculture (Excluding Horticulture and Drought Prone Areas Programme)"

> "That a sum not exceeding Rs. 1,31,08,000 inclusive of the sum granted 'on account' be granted to the Government to defray the charge which will comes in course of payment during the finacial year ending 31st day of March 1980 in rerpect of Demand No. 33 "State Legislatures".

"That a sum not exceeding Rs. 7,52,18,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1980 in respect of Dem nd No. 3. "Soil and Water Conservation".

SRI K.B. SHIVIAH (Minister for Horticulture and Sericulture).

Sir, on the recommendation of the Governor I beg to move:

" That a sum not exceeding Rs. 4,41,56,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1980 in respect of Demand No. 2 "Horticulture"

The questions were proposed

†ಶ್ರೀ ವೈ. ರಾಮಕೃಷ್ಣ (ಆನೇಕಲ್).—ಸನ್ಮಾನ್ಯ ಅಧ್ಯಕ್ಷರೇ, ಈ ದಿನ ಮಾನ್ಯ ಮಂತ್ರಿಗಳು ಸಭೆಯ ಮುಂದೆ ಮಂಡಿಸಿರತಕ್ಕ ೧೯,೫೬,೭೯,೦೦೦ ರೂಪಾಯಿಗಳ ವ್ಯವಸಾಯದ ಬೇಡಿಕೆ, ೭, ೫೨, ೧೮, ೦೦೦ ಸಾಯಿಲ್ ಕನ್ಸರ್ವೇಷನ್‌ಗೂ ಮತ್ತು ೪,೪೧,೫೬,೦೦೦ ಹಾರ್ಟಿಕಲ್ಚರ್ ತೋಟಗಾರಿಕೆ ಇಲಾಖೆಯ ಬೇಡಿಕೆ, ಮತ್ತು ೧,೫೧,೧೫,೦೨೦ ರೂಪಾಯಿಗಳ ಲೆಜಿಸ್ಲೇಚರ್ ಬೇಡಿಕೆ, ಒಟ್ಟು ೫೧,೫೦,೫೩,೦೦೦ ರೂಪಾಯಿಗಳ ಬೇಡಿಕೆಯನ್ನು ನಾನು ವಿರೋಧಿಸುವುದಕ್ಕೆ ನಿಂತಿದ್ದೇನೆ. ಕಾರಣ ಇಷ್ಟೆ, ಮಾನ್ಯ ಮಂತ್ರಿಗಳು ಇನ್ನೂ ಹೆಚ್ಚಿನ ಹಣ ಬೇಕಾದರೆ ಕೇಳಲಿ, ಕೊಡೋಣ, ಆದರೆ ಪಡೆದು ಕೊಂಡಂಥ ಹಣಕ್ಕೆ ತಕ್ಕಂಥ ಕಾರ್ಯಕ್ರಮಗಳನ್ನು ಜಾರಿಗೆ ತರುವುದರಲ್ಲಿ ಸರ್ಕಾರ ಸಂಪೂರ್ಣವಾಗಿ ವಿಫಲಗೊಂಡಿದೆ ಎಂದು ನಾನು ಹೇಳಬೇಕಾಗಿದೆ. ವ್ಯವಸಾಯ ಇಲಾಖೆಗೆ ಯಾವರೀತಿಯ ಜಡತ್ವ ಹಿಡಿದಿತ್ತೋ ಆ ಒಂದು ಜಡತ್ವ ಇವತ್ತಿಗೂ ಮುಂದುವರಿಯುತ್ತಿದೆ. ಇನ್ನೂ ಹೆಚ್ಚಾಗಿ ಮುಂದುವರಿಯುತ್ತಿದೆ ಎಂದು ನಾನು ಹೇಳುತ್ತೇನೆ. ಅಧಿಕಾರಿಗಳಲ್ಲಿ ನಿರಾಶಕ್ತಿಯು ಬೇರೂರಿದ ಇದರ ದೆಸೆಯಿಂದ ನಮ್ಮ ರೈತರು ಜೀವನಾಗಿ ಕೆಲಸ ಮಾಡಲಿಕ್ಕೆ ಮನಸ್ಸುಮಾಡಿಲ್ಲ ಎಂದು ನಾನು ಈ ದಿನ ಆಪಾದನೆ ಮಾಡುತ್ತಿದ್ದೇನೆ. ಇದರ ಜೊತೆಗೆ ನಮಗೆ ಯಾವ ರೀತಿಯು ಕಾರ್ಯಸಾಧನೆಯಾಗಬೇಕಾದರೂ ಕೂಡ ಉತ್ಸಾಹ ಬಹಳ ಮುಖ್ಯ. ಆ ಒಂದು ಉತ್ಸಾಹವನ್ನು ನಾವು ಇಲಾಖೆಯಲ್ಲಿ ನೋಡುತ್ತಿಲ್ಲ. ಎಷ್ಟು ಹಣವನ್ನು ಸರ್ಕಾರದವರು ಖರ್ಚು ಮಾಡಿದರೂ ಕೂಡ ಸರಿಯಾದ ಉತ್ಸಾಹ ಇಲಾಖೆಯಲ್ಲಿ ಕಾಣದೇ ಇರುವುದಕ್ಕೆ ಕಾರಣಗಳನ್ನು ಮಾನ್ಯ ಮಂತ್ರಿಗಳು ಕಂಡುಹಿಡಿಯಬೇಕು. ತಾವು ಒಬ್ಬ ಡಾಕ್ಟರ್ ಕೆಲಸ ಮಾಡಿದ ಹಾಗೆ ವ್ಯವಸಾಯದ ಇಲಾಖೆಯಲ್ಲಿ ತಾವು ಕೆಲಸ ಮಾಡಿದರೆ, ಇಲಾಖೆಯನ್ನು ತೆಗೆದು ಕೊಂಡಿದ್ದಕ್ಕೂ ಒಂದು ಸಾರ್ಥಕವಾಗುತ್ತದೆ ಎಂದು ನಾನು ಹೇಳುತ್ತೇನೆ. ವ್ಯವಸಾಯದ ಇಲಾಖೆ, ಸುಮಾರು ೮೦ರಷ್ಟು ಜನರ ಆರ್ಥಿಕ ವ್ಯವಸ್ಥೆಗೆ ಸಂಬಂಧಪಟ್ಟ ಇಲಾಖೆಯಾಗಿದೆ. ಶೇಕಡ ೮೦ರಷ್ಟು ಜನರು ವ್ಯವಸಾಯವನ್ನು ಆಪಲಂಬಿಸಿದ್ದಾರೆ. ಇಷ್ಟೊಂದು ಪ್ರಮಾಣದಲ್ಲಿ ಜನರು ವ್ಯವಸಾಯದಲ್ಲಿ ನಿರತರಾಗಿದ್ದರೂ ಕೂಡ ಎಷ್ಟು ಪ್ರಮಾಣದಲ್ಲಿ ಬರಬೇಕೋ ಅದು ಬರುತ್ತಿಲ್ಲ. ತಾವು ತಮ್ಮ ಪ್ರೊಡಕ್ಷನ್ಸ್ ಜಾಸ್ತಿಯಾಗಿದೆಯೆಂದು ಹೇಳಬಹುದು. ಇದಕ್ಕೆ ಸರ್ಕಾರವೇ ದೊಣೆ ಸರ್ಕಾರದಿಂದಲೇ ಇಷ್ಟು ಹೆಚ್ಚಾಗಿದೆ ಎಂದು ಹೇಳುವುದನ್ನು ತಾವು ಬಿಡಬೇಕು. ರಾಜ್ಯದಲ್ಲಿ ಮಳೆ ಚೆನ್ನಾಗಿ ಬಂದು ರೈತರು ಇನ್ನೂ ಶ್ರದ್ಧೆ ವಹಿಸಿ ಕೆಲಸ ಮಾಡಿದ್ದರೆ ಸರಿಯಾಗಿ ಉತ್ಪತ್ತಿ ಬಂದೇ ಬರುತ್ತದೆ. ಸಕಾಲಕ್ಕೆ ಮಳೆಯಾಗದೆ ಸರ್ಕಾರದವರು ಸಕಾಲಕ್ಕೆ ಕೊಡಬೇಕಾದಂಥ ಸಾಲ ಪೈರೆ ಕೊಡದಿದ್ದರೆ ರೈತರಿಗೆ ಕಷ್ಟ ಬರುತ್ತದೆ.

ಶ್ರೀ ಕೆ. ಹೆಚ್. ರಂಗನಾಥ್.—ಸಮ್ಮ ರಾಜ್ಯದಲ್ಲಿ ಪ್ರೊಜಕ್ಟಿವಿಟಿ ಯಾವ ಅರ್ಥದಲ್ಲಿ ಕಡಿಮೆಯಾಗಿದೆ ಎಂದು ಹೇಳುತ್ತೀರಿ ? ಯಾವ ಪ್ರಮಾಣದಲ್ಲಿ ಆಗಬೇಕೋ ಅಷ್ಟು ಆಗಿಲ್ಲ ಎಂದು ಹೇಳುತ್ತೀರೋ ಅಥವಾ ಯಾವ ಅರ್ಥದಲ್ಲಿ ಎಂದು ಹೇಳುತ್ತೀರಾ ?

ಶ್ರೀ ವೈ. ರಾಮಕೃಷ್ಣ.—ಟೋಟಲ್ ಎಕರೇಜ್ ಅರ್ಥದಲ್ಲಿ ನಾನು ಹೇಳಿದ್ದುದು. ವ್ಯವಸಾಯದಲ್ಲಿ ನಿರತರಾಗಿರತಕ್ಕ ಜನರ ಪರಿಸ್ಥಿತಿಯನ್ನು ಸುಧಾರಿಸುವುದಕ್ಕೆ ಸರ್ಕಾರ ಯಾವ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೋ ಆ ಕಾರ್ಯಕ್ರಮಗಳನ್ನು ಹಾಕಿಕೊಂಡಿಲ್ಲ. ಕಾನೂನುಗಳನ್ನು ನೀವು ಇಲ್ಲಿ ಮಾಡುತ್ತೀರಿ, ಕಾನೂನುಗಳನ್ನು ಮಾಡಿದ ಮಾತ್ರಕ್ಕೆ ಅವು ಇಂಪ್ಲಿಮೆಂಟ್ ಆದುವು ಎಂದು ತಿಳಿದುಕೊಂಡರೆ ಅದು ತಪ್ಪು. ವ್ಯವಸಾಯದ ಮಿನಿಮಮ್ ವೇಜಸ್ ಆಕ್ಟ್ ಜಾರಿಗೆ ಬಂದಿದೆ. ಆದರ ಪ್ರಕಾರ ಯಾರು ಕೂಲಿ ಕೊಡುತ್ತಿದ್ದಾರೆ ತಾವೇ ಹೇಳಬೇಕು ? ನಾವೆಲ್ಲರೂ ಇದನ್ನು ಆಲೋಚನೆ ಮಾಡಬೇಕು. ಅಗ್ರಿಕಲ್ಚರಲ್ ಲೇಬರ್ಸ್‌ಗೆ ಯಾವ ಕಡೆಯಲ್ಲಿ ಮಿನಿಮಮ್ ವೇಜಸ್ ಆಕ್ಟ್ ಪ್ರಕಾರ ವೇಜಸ್ ಸಿಕ್ಕುತ್ತಿದೆ ? ಸಿಕ್ಕುತ್ತಿಲ್ಲ.

ಎರಡನೆಯದಾಗಿ, ಗಂಡಸರು, ಹೆಂಗಸರೂ ಸಮನಾಗಿ ಕೂಲಿ ಕೊಡಬೇಕು ಎಂದು ನಾವು ಶಾಸನವನ್ನು ಮಾಡಿದ್ದೇವೆ. ಇದನ್ನು ಎಲ್ಲಿ ಜಾರಿಗೆ ಕೊಟ್ಟಿದ್ದಾರೆಂದು ತಾವು ಆಲೋಚನೆ ಮಾಡಬೇಕು. ಕಾನೂನನ್ನೇನೋ ಮಾಡುತ್ತೇವೆ. ಆದರೆ ಅದನ್ನು ಅನುಷ್ಠಾನಕ್ಕೆ ತರುವಾಗ ಲೋಪದೋಷಗಳಾಗುತ್ತವೆಂದು ನಾನು ಹೇಳುತ್ತೇನೆ. ಇದರ ಕಡೆ ಮಾನ್ಯ ಮಂತ್ರಿಗಳು ಗಮನ ಕೊಡುತ್ತಿಲ್ಲ. ಉತ್ಪಾದನೆ ತೆಗೆದುಕೊಂಡು ಸೂಕ್ತ ಗಮನ ಕೊಡಬೇಕು ಎಂದು ನಾನು ಹೇಳುತ್ತೇನೆ. ಕಳೆದ ೫೦–೬೦ ವರ್ಷದ ಹಿಂದೆ, ರೈತನ ಸ್ಥಿತಿ ಯಾವ ರೀತಿ ಇತ್ತೋ ಇವತ್ತೂ ಕೂಡ ಅದೇ ಸ್ಥಿತಿ ಇದೆ. ಅವನ ಆರ್ಥಿಕ ಸ್ಥಿತಿ ಅಪಾಸ ನೈಜ ಸ್ಥಿತಿ ತುಂಬಾ ಚಿಂತಾಜನಕವಾಗಿದೆ. ಮಾನ್ಯ ಮಂತ್ರಿಗಳು ನನ್ನ ಜೊತೆಯಲ್ಲಿ ಬರಲಿ. ನಾನೇ ನಮ್ಮ ಅಧ್ಯಕ್ಷರಿಪರ ಕಾನ್ಸ್‌ಟಿಟ್ಯೂಯನ್ಸಿಗೆ ಕರೆದುಕೊಂಡು ಹೋಗಿ ತೋರಿಸುತ್ತೇನೆ. ರೈತರ ಪರಿಸ್ಥಿತಿ ಹೇಗಿದೆ ಎಂದು ಅವರೇ ನೋಡಲಿ. ನಾನು ಈ ಮಾತನ್ನು ಹೇಳುವಾಗ ಉತ್ಪ್ರೇಕ್ಷೆ ಮಾಡಿ ಹೇಳುತ್ತೇನೆಂದು ಯಾರೂ ತಿಳಿಯಬಾರದು. ಅವರ ಆರ್ಥಿಕ ಸ್ಥಿತಿಯ ಬಗ್ಗೆ ಅಂಕಿ ಅಂಶಗಳನ್ನು ತೆಗೆದು ಕೊಳ್ಳೋಣ. ರೈತನಿಗೆ ಔಷಧಿಯನ್ನು ಕೊಡುಕೊಳ್ಳುವುದಕ್ಕೂ ಸಹ ಕಾಸಿಲ್ಲದಾಗಿದೆ. ಎರಡು ಹೊತ್ತು ಊಟಕ್ಕೆ ಅವರ ಹತ್ತಿರ ಧಾನ್ಯವಿರುವುದಿಲ್ಲ. ಮೈಮೇಲಿರುವ ಬಟ್ಟೆಯನ್ನು ಬದಲಾಯಿಸಿ ಮಾಡಬೇಕೆಂದು ಬೇರೆ ಒಂದು **ಜೊತೆ ಬಟ್ಟೆ** ಇರುವುದಿಲ್ಲ; ಮನೆಯ ಮಂಲಿನ ಮೊಚಗಳೇನಾದರೂ ಒಡೆದುಹೋದರೆ ಹೊಸದಾಗಿ ತಂದು ಮುಚ್ಚುವುದಕ್ಕೆ ಪೈಸವಿರುವುದಿಲ್ಲ, ಮಕ್ಕಳನ್ನು ವಿದ್ಯಾಭ್ಯಾಸಕ್ಕೆ ಕಳುಹಿಸಬೇಕೆಂದರೆ, ಮಕ್ಕಳಿಗೆ ಅಗತ್ಯವಾದ ಬಟ್ಟೆಗಳು, ಪುಸ್ತಕ, ಬಳಪ ತಂದುಕೊಡಲು ಕಾಸಿರುವುದಿಲ್ಲ. ಈ ಒಂದು ಪರಿಸ್ಥಿತಿ ಶೇಕಡಾ ೫೦ ರಷ್ಟು ರೈತರಲ್ಲಿರುವುದನ್ನು ನಾವು ನೋಡುವುದಾಗಿದೆ. ಅವರ ಒಂದು ಪರಿಸ್ಥಿತಿಯನ್ನು ಉತ್ಪತ್ತಿಮಾಡಿಸುವುದಕ್ಕೆ ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ ? ಇದನ್ನು ತಾವು ಆಲೋಚನೆ ಮಾಡಬೇಕು. ಇವರ ಜೊತೆಗೆ ರೈತರು ಬೆಳೆದ ಬೆಳೆಗೆ ಸೂಕ್ತ ಧಾರಣೆ ಸಿಗುತ್ತಿಲ್ಲ. ರೈತರು ಹಾಂದುವರೆಯದಿರುವುದಕ್ಕೆ ಇದೂ ಒಂದು ಕಾರಣ. ಇದಕ್ಕೆ ನಾವು ಎಷ್ಟರ ಮಟ್ಟಿಗೆ ಕಾರಣ ಎಂದು ತಾವು ಕೇಳಬಹುದು. ಇವರೆಲ್ಲಿ ನಿಮ್ಮ ಕರ್ತವ್ಯ ಏನಿದೆ ಎಂಬುದನ್ನು ಹೇಳುತ್ತೇನೆ. ಕ್ವಾಲಿಟಿ ಮತ್ತು ಕ್ವಾಂಟಿಟಿ ಇವೆರಡನ್ನೂ ಇಂಪ್ರೂ ಮಾಡಬೇಕೆಂಬ ಮನಸ್ಸು ನಿಮಗಿದ್ದರೆ ವ್ಯವಸಾಯ ಇಲಾಖೆಯಲ್ಲಿ ರೀಸರ್ಚ್ ಏಂಗ್ ಎಂದು ಏನೆವೆ, ಅದು ಹೆಚ್ಚಿನ ರೀತಿಯಲ್ಲಿ ಉತ್ಪಾದನೆಯಾಗಬೇಕಾದಂತಹ ಕೆಲಸ ಮಾಡುವಂತಹ ಒಂದು ಕಾರ್ಯಕ್ರಮವನ್ನು ತಾವು ಹಾಕಿಕೊಳ್ಳಬೇಕು. ಅಲ್ಲಿ ಕೆಲಸ ಮಾಡಲು ದೇಶಾಭಿಮಾನವಿರತಕ್ಕಂಥವರನ್ನು, ಉತ್ತಮ ಪರಿಣತರನ್ನು ಹಾಕಬೇಕು. ನಂತರ ಇವರು ಮಾಡತಕ್ಕಂಥ ರೀಸರ್ಚಿನ ಪ್ರೊಗ್ರೆಸ್‌ನ್ನು ತಾವು ವಾಚ್ ಮಾಡಬೇಕು. ಇವರು ಹೊಸ ಹೊಸ ಉತ್ಪನ್ನ ತಳಿಗಳನ್ನು ಕಂಡುಹಿಡಿಯುವುದರ ಕಡೆಗೆ ಗಮನ ಕೊಡದೆ, ಕೇವಲ ದೊಡ್ಡ ದೊಡ್ಡ ಸಂಬಳ ಪಡೆದುಕೊಂಡು, ದೊಡ್ಡ ದೊಡ್ಡ ಕಾರುಗಳಲ್ಲಿ ಓಡಾಡಿಕೊಂಡು, ದೊಡ್ಡ ದೊಡ್ಡ ಬಂಗಲೆಗಳಲ್ಲಿ ವಾಸ ಮಾಡಿದರೆ, ಅವರು ವ್ಯವಸಾಯ ಕ್ಷೇತ್ರದಲ್ಲಿ ಹೆಚ್ಚಿನ ಪರಿಣತರಾಗಿದ್ದಾರೆಂದು ತಾವು ತಿಳಿದುಕೊಳ್ಳಬಾರದು. They should be judged by their performance and not by their academic qualification. ಈ ವಿಚಾರದಲ್ಲಿ ನಾನು ರಷ್ಯಾ ದೇಶಕ್ಕೆ ಹೋಗಿ ನೋಡಿಕೊಂಡು ಬಂದಿದ್ದೇನೆ. ರೀಸರ್ಚ್ ಮಾಡುವುದರಲ್ಲಿ ಅವರು ಬಹಳ ಮುಂದುವರಿದಿದ್ದಾರೆ. I congratulated the research minded people. ಅಂತಹ ಒಂದು ವಾತಾವರಣವನ್ನು ಇಲ್ಲಿಯೂ ಸಹ ನೀವು ನಿರ್ಮಾಣ ಮಾಡುವುದಕ್ಕೆ ನಾನೆನ್ನು ಮಾಡಬೇಕು. ಮತ್ತು ಇಲ್ಲಿನ ಅಧಿಕಾರಿಗಳನ್ನು research-minded ಆಗಿ ಮಾಡಬೇಕು. ಆಗ ಸಂಶೋಧನೆ ಜೆನ್ಯಾಗಿ ಮುಂದುವರೆಯುತ್ತದೆ. ಈಗ ವ್ಯವಸಾಯ ವಿಶ್ವವಿದ್ಯಾನಿಲಯದ ವಿಸ್ತರಣೆಯ ಬಗ್ಗೆ ಒಂದು ಮಿಗ್ ತೆಗೆದ್ದೀರಿ. ಅಲ್ಲಿ ರಾಗಿಯ ಬಗ್ಗೆ ಇಂಡಾಫ್-೪, ಇಂಡಾಫ್-೬

ಎಂದು ಹೊಸಹೊಸ ತಳಿಗಳನ್ನು ಕಂಡುಹಿಡಿದಿರುವಂತೆ ಬೇಳೆಕಾಳುಗಳ ಬಗ್ಗೆಯೂ ಕಂಡುಹಿಡಿಯುವುದಕ್ಕೆ ತಾವು ಅನುಕೂಲ ಮಾಡಿ ಕೊಡಬೇಕು. ಏಕೆಂದರೆ ನಮ್ಮಲ್ಲಿ ಈಗ ಬೇಳೆಕಾಳಿನ ಅಭಾವ ಮತ್ತು ಎಣ್ಣೆಬೀಜಗಳ ಅಭಾವ ಜಾಸ್ತಿ ಇದೆ. ಇದನ್ನು ನಿವಾರಣೆ ಮಾಡಲು ಸೂಕ್ತ ಕ್ರಮ ಕೈಕೊಳ್ಳುವಲ್ಲಿ ತಾವು ಸಂಪೂರ್ಣವಾಗಿ ವಿಫಲರಾಗಿದ್ದೀರಿ ಎಂದು ಹೇಳುವುದಕ್ಕೆ ನಾನು ಸಿದ್ಧನಾಗಿದ್ದೇನೆ. ಇನ್ನೊತ್ತು ತಮ್ಮ ಒಂದು ಕ್ಷೇತ್ರವನ್ನು ಬಿಟ್ಟು ಉತ್ತರದ ಕಡೆಗೆ ಹೋದರೆ ಹಿಂದೂಪುರ, ಮಡಕಶಿರಾ. ಇಲ್ಲೆಲ್ಲಾ ಸಾವಿರಾರು ಪಲ್ಲದವರೆಗೆ ಕಡಲೆಕಾಯಿಯನ್ನು ಬೆಳೆದಿದ್ದಾರೆ. ತಾವು ಬೇಕಾದರೆ ಹೋಗಿ ನೋಡಬಹುದು. ಆ ಭಾಗಗಳನ್ನು ಬಿಟ್ಟು ನಮ್ಮ ರಾಜ್ಯದ ಬಾರ್ಡರಿಗೆ ಬಂದರೆ ಭೂಮಿಯೆಲ್ಲಾ ಬಂಜರಾಗಿದೆ. ಆಲ್ಲಿ ಕಡಲೆಕಾಯಿ ಬೆಳೆಯಲು ಉತ್ತಮವಾದ ವಾತಾವರಣವಿದ್ದರೂ ಸಹ ನಮ್ಮ ಇಲಾಖೆಯಲ್ಲಿನ ಅಧಿಕಾರಿಗಳು ಸಕಾಲದಲ್ಲಿ ರೈತರಿಗೆ ಎಣ್ಣೆಕಾಳುಗಳನ್ನು ಒದಗಿಸುವುದರಲ್ಲಿ ವಿಫಲರಾಗಿದ್ದಾರೆ. ಆದೇ ಆಂಧ್ರ ಪ್ರದೇಶದಲ್ಲಿ ಒಂದು ಎಕರೆ, ಎರಡು ಎಕರೆ, ಮೂರು ಎಕರೆ ಜಮೀನು ಇರುವವರೆಲ್ಲಾ ಕಡಲೆಕಾಯಿ ಬೆಳೆಯುತ್ತಿದ್ದಾರೆ. ನಮ್ಮಲ್ಲಿ ಕಡಲೆಕಾಯಿ ಬಿತ್ತನೆ ಬೆಲೆ ಕ್ವಿಂಟಾಲ್ ಒಂದಕ್ಕೆ ೨೫೦–೩೦೦ ರೂ. ಗಳಿರುವುದರಿಂದ, ಆಷ್ಟೊಂದು ಹಣ ಎಲ್ಲಿಂದ ಬಡ ರೈತರು ತರಬೇಕು ? ಆದಕಾರಣ ಈ ಸಲವಾದರೂ ಎಲ್ಲಿಯೂ ರೈತರು ಭೂಮಿಯನ್ನು ಬಂಜರು ಬಿಡದಂತೆ ಕಡಲೆಕಾಯಿ ಬೆಳೆಯುವಂತೆ ಅಧಿಕಾರಿಗಳು ವಿಶೇಷವಾದಂಥ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಕಡಲೆಕಾಯಿ ಬೆಳೆದರೆ ರೈತರ ಆರ್ಥಿಕ ಪರಿಸ್ಥಿತಿಯೂ ಸುಧಾರಿಸುತ್ತದೆ. ಮತ್ತು ಎಣ್ಣೆಯೂ ನಮಗೆ ಕಡಿಮೆ ಬೆಲೆಗೆ ದೊರೆಯುವುದಕ್ಕೆ ಅವಕಾಶವಾಗುತ್ತದೆ. ಇದರ ಕಡೆಗೆ ನಿಮ್ಮ ರೀಸರ್ಚ್-ವಿಂಗ್‌ನವರು ಗಮನ ಹರಿಸಬೇಕೆಂದು ಹೇಳುತ್ತೇನೆ.

ಇನ್ನು ಅನೇಕ ಕಡೆಗಳಲ್ಲಿ ಡೆಮಾನ್ಸ್‌ಟ್ರೇಷನ್ ನಡೆಸುತ್ತಿದ್ದೀರಿ. ಬೇರೆ ಕಡೆಗಳಲ್ಲಿ ಡೆಮಾನ್ಸ್‌ಟ್ರೇಷನ್ ಮಾಡುವುದಕ್ಕೆ ಬದಲು, ಬಡವರ ಜಮೀನುಗಳಲ್ಲಿ ಅಂದರೆ ಯಾರು ಒಂದು ಎಕರೆ, ಒಂದೂವರೆ ಎಕರೆ ಜಮೀನು ಇಟ್ಟುಕೊಂಡಿರುತ್ತಾರೋ, ಅಂತಹವರ ಜಮೀನುಗಳಲ್ಲಿ ಕಬ್ಬು, ಭತ್ತ, ಕಡಲೆಕಾಯಿ ಮುಂತಾದ ಬೆಳೆಗಳನ್ನು ಬೇರೆಯವರ ಕಣ್ಣಿಗೆ ಕಾಣಿಸುವಂತೆ ಬೆಳೆಸಿ ಡೆಮಾನ್ಸ್‌ಟ್ರೇಷನ್ ನಡೆಸಬೇಕೆಂದು ಸೂಚನೆ ಕೊಡುತ್ತೇನೆ.

ಇನ್ನು ಸಾಯಿಲ್ ಅಂಡ್ ವಾಟರ್ ಕನ್‌ಸರ್‌ವೇಷನ್‌ಗೆ ಅಗಾಧವಾದಂಥ ಹಣ ಪಡೆದಿದ್ದೀರಿ. ಈ ಒಂದು ಕೆಲಸ ಅನೇಕ ವರ್ಷಗಳಿಂದ ನಡೆಯುತ್ತಿದ್ದರೂ ಸಹ, ನಮ್ಮಲ್ಲಿರುವ ಗುಡ್ಡಗಾಡು ಜಮೀನನ್ನು ಮತ್ತು ಬಂಜರು ಜಮೀನನ್ನು ಇನ್ನೂ ವ್ಯವಸಾಯಕ್ಕೆ ಯೋಗ್ಯವಾದಂಥ ಜಮೀನನ್ನಾಗಿ ಪರಿವರ್ತಿಸಲು ಇಷ್ಟೊಂದು ತಡವಾಗಿರುವುದು ಏತಕ್ಕೆ ಎಂದು ಪ್ರಶ್ನೆ ಮಾಡಬೇಕಾಗಿದೆ. ಈ ಕೆಲಸ ಮಾಡಲು ಅಧಿಕಾರಿಗಳ ಕೊರತೆ ಇದೆಯೇ ಅಥವಾ ಹಣದ ಕೊರತೆ ಇದೆಯೇ ಎಂದು ಕೇಳುತ್ತೇನೆ ? ವ್ಯವಸಾಯಕ್ಕೆ ಯೋಗ್ಯವಾದಂಥ ಜಮೀನು ನಮ್ಮಲ್ಲಿ ಸಾಗುವಳಿ ಮಾಡದೆ ಬಂಜರಾಗಿ ಬಿದ್ದಿದೆ. ಇದರ ಬಗ್ಗೆ ಸೂಕ್ತವಾದ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಹೇಳುತ್ತೇನೆ. ಇದರ ಜೊತೆಗೆ ಅನೇಕ ವರ್ಷಗಳಿಂದ ವ್ಯವಸಾಯ ಮಾಡಿದ ಫಲವಾಗಿ ತರೀ ಜಮೀನಿನಲ್ಲಿರತಕ್ಕಂಥ ಸಾರವೆಲ್ಲಾ ಹೋಗಿಬಿಟ್ಟಿದೆ. ಇದೆಲ್ಲಾ ಚೌಳು ಜಮೀನಾಗಿಬಿಟ್ಟಿದೆ. ಅಂದರೆ ಉಪ್ಪಿನ ಪ್ರಮಾಣ ಜಾಸ್ತಿ ಇದೆ. ಇಂತಹ ಜಮೀನುಗಳಲ್ಲಿ ಬೆಳೆ ತೆಗೆಯುವುದಕ್ಕಾಗುವುದಿಲ್ಲ. ಇಂತಹ ಜಮೀನುಗಳನ್ನು ತಹಬಂದಿಗೆ ತರಲು ರೈತರಿಗೆ ಮುಫತ್ತಾಗಿ ರಾಸಾಯನಿಕ ಗೊಬ್ಬರಗಳನ್ನು ಹಂಚಬೇಕು. gypsom salt ರೈತರಿಗೆ ಪುಕ್ಕಟೆಯಾಗಿ ಹಂಚಬೇಕು. ಇಲ್ಲದಿದ್ದರೆ ಅದು ಪಕ್ಕದಲ್ಲಿರುವ ಜಮೀನುಗಳಿಗೂ ಹಬ್ಬುತ್ತದೆ. ಅನಂತರ ಇಡೀ ಪ್ರದೇಶವೆಲ್ಲಾ ಹಾಳಾಗಿ ಬಿಡುತ್ತದೆ. ಮತ್ತು ಇಡೀ ಜಮೀನೆಲ್ಲಾ alkaline ಆಗಬಹುದು. ಆದ್ದರಿಂದ ಈ ವಿಚಾರದಲ್ಲಿ ತಜ್ಞರು ಹೇಳಿದಂತ ಔಷಧಗಳನ್ನೆಲ್ಲಾ ಪುಕ್ಕಟೆಯಾಗಿ ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಎಚ್. ರಂಗನಾಥ್.—ಎಲ್ಲರಿಗೂ ಪುಕ್ಕಟೆಯಾಗಿ ಹಂಚಬೇಕೆಂದು ಹೇಳುತ್ತೀರಾ ?

ಶ್ರೀ ವೈ. ರಾಮಕೃಷ್ಣ,—ಬಡ ರೈತರಿಗೆ ಪುಕ್ಕಟೆಯಾಗಿ ಹಂಚಿ, ಸಾಹುಕಾರರಿಗೆ ಬೇಕಾದರೆ ಸಬ್ಸಿಡಿ ರೂಪದಲ್ಲಿ ಹಂಚಿ. ಒಬ್ಬ ಸಾಹುಕಾರ ಜಮೀನಿನಲ್ಲಿ ಎರಡು ಎಕರೆಯಷ್ಟು ಭಾಗದಲ್ಲಿ ಚೌಳು ಭೂಮಿ ಇದ್ದರೆ, ಆ ಸಾಹುಕಾರ ಅದನ್ನು ಹಾಗೆಯೇ ಬಿಟ್ಟುಬಿಡಬಹುದು ; ಅನಂತರ ಆದೇನಾದರೂ ಪಕ್ಕದ ಜಮೀನಿಗೆ ಹರಡಿದರೆ ಮತ್ತು ಪಕ್ಕದ ಜಮೀನು ಬಡವನಿಗೆ ಸೇರಿದ್ದಾಗಿದ್ದರೆ, ಆ ಬಡವ ಏನು ಮಾಡಬೇಕು ? ಆದಕಾರಣ ಬಡವರಿಗೆ ಪುಕ್ಕಟೆಯಾಗಿ ಔಷಧಿಗಳನ್ನು ಹಂಚಬೇಕೆಂದು ಹೇಳುತ್ತೇನೆ ಇದು ಇಡೀ ದೇಶಕ್ಕೇ ಬಂದಿರುವ ಕಾಯಿಲೆ, ಇದಕ್ಕೆ ಹಣ ಖರ್ಚು ಮಾಡುವುದು ರೈತರ ಪ್ರಗತಿಗಾಗಿ ಎಂದು ಯಾರೂ

ತಿಳಿದುಕೊಳ್ಳಬಾರದು; ವ್ಯವಸಾಯಕ್ಕೆ ಖರ್ಚು ಮಾಡುವಂತಹ ಶಿಕ್ಷಣವೆಲ್ಲಾ ದೇಶದ ಪ್ರಗತಿಗೆ ಎಂದು ನಾವುಗಳು ತಿಳಿದುಕೊಳ್ಳಬೇಕು. ಇಲ್ಲಿ ವ್ಯವಸಾಯಕ್ಕೆ ಖರ್ಚು ಮಾಡುವುದು ಎಂದರೆ It may be amount on research demonstration or extension ಈ ಬಾಬುಗಳಿಗೆ ನಾವು ಒಂದು ಪೈಸೆ ಖರ್ಚು ಮಾಡಿದರೂ ಸಹ ಅದು ದೇಶದ ಉದ್ಧಾರಕ್ಕೆ ಎಂದು ನಾವು ತಿಳಿದುಕೊಳ್ಳುವುದು ಒಳ್ಳೆಯದು.

೧೨-೫೦ ಪಿ.ಎಂ.

ಪೊಟ್ಟಿಮೊದಲನೆಯದಾಗಿ ನಮ್ಮ ರಾಜ್ಯದಲ್ಲಿ ನೀರಾವರಿ ಭೂಮಿ ಬಹಳ ಕಡಿಮೆ ಇದೆ. ನಾವು ಎಷ್ಟು ಕಷ್ಟಪಟ್ಟು ಪ್ರಯತ್ನ ಪಟ್ಟರೂ ನೀರಾವರಿ ಸೌಕರ್ಯ ಹೊಂದಿರತಕ್ಕ ಭೂಮಿ ಶೇಕಡಾ ೧೮ ರಿಂದ ೨೦ರ ಒಳಗೇ ಇದೆ. ಇಷ್ಟಕ್ಕಿಂತ ಹೆಚ್ಚು ಮಾಡುವುದಕ್ಕೆ ಇಡುವರಿವಿಗೂ ಸಾಧ್ಯವಾಗಿಲ್ಲ. ಆದುದರಿಂದ ನಾವು ಬೆಳೆಯುವುದನ್ನು ಬೆಳೆಯುವುದಕ್ಕೆ ಏನು ಫರ್ಟಿಲೈಸರ್ಸ್ ಹಾಕುತ್ತೇವೆ ಅದನ್ನು ನಾವು ಈ ಶೇಕಡಾ ೨೦ ಭೂಮಿಯಲ್ಲೇ ಹಾಕಬೇಕಾಗುತ್ತದೆ. ನಾವು ಯೂರಿಯಾ, ಅಮೋನಿಯಂಸಲ್ಫೇಟ್‌ನೈಟ್ರೇಟ್‌ಗಳನ್ನು ಬೆಳೆಗೆ ಹೆಚ್ಚು ಉತ್ಪತ್ತಿಗಾಗಿ ಹಾಕುತ್ತೇವೆ ಅದನ್ನು ನಾವು ಈ ಶೇಕಡಾ ೨೦ರಷ್ಟು ಇರುವ ಭೂಮಿಗೆ ಹಾಕಬೇಕಾಗುತ್ತದೆ. ಇವತ್ತು ನಾವು ನೀರಾವರಿ ಆಗತಕ್ಕಂತಹ ಜಾಗವನ್ನು ತೆಗೆದುಕೊಂಡರೆ ಅವು ನದಿಯ ನೀರಿನಿಂದ, ಕೆರೆ ಕಟ್ಟೆಗಳನ್ನು ಕಟ್ಟಿ ನೀರನ್ನು ಪಾಯಿಸುವುದರಿಂದ, ಭಾವಿಗಳನ್ನು ತೋಡಿ ನೀರನ್ನು ಎತ್ತಿ ಬಳಸುವುದರಿಂದ ನೀರಾವರಿ ಪ್ರದೇಶ ದೊರೆಯುತ್ತದೆ. ಇದು ನಮ್ಮಲ್ಲಿ ಕೇವಲ ಶೇಕಡಾ ೨೦ ಇದೆ. ಇವತ್ತು ನಾವು ಇಡೀ ದೇಶದಲ್ಲಿ ಬೆಳೆಯತಕ್ಕ ಎಲ್ಲಾ ಬೆಳೆಗೂ ಯೂರಿಯಾ ಗೊಬ್ಬರವನ್ನು ಹಾಕುತ್ತೇವೆನ್ನುವುದು ಸಾಧ್ಯವಾಗದ ಮಾತು. ಇವತ್ತು ಕಡಲೇಕಾಯಿಗೆ ೫೫೫ ಯೂರಿಯಾ ಹಾಕಿ ಎಂದು ಹೇಳುತ್ತಾರೆ. ಆದರೆ ಅದನ್ನು ಹಾಕುವುದರಿಂದ ಲಾಭದಾಯಕವಾಗುವುದಿಲ್ಲ. ನಾವು ಅದನ್ನು ಹಾಕಿದ ಮೇಲೆ ಅದರಿಂದ ಎಷ್ಟು ಉತ್ಪತ್ತಿ ಬರುತ್ತದೆಂದು ಲೆಕ್ಕ ಹಾಕಬೇಕಾಗುತ್ತದೆ. ಆದ್ದರಿಂದ ಕೆಲವೊಂದು ಬೆಳೆಗಳಿಗೆ ರಾಸಾಯನಿಕ ಗೊಬ್ಬರ ಹಾಕಬೇಕಾಗುತ್ತದೆ. ಇವತ್ತು ಪ್ರತಿಯೊಂದು ಬಿಸಾಡುವ ವಸ್ತುವಿನಿಂದಲೂ ಗೊಬ್ಬರವನ್ನು ತಯಾರಿಸುತ್ತಿದ್ದಾರೆ. ಕಾಗದದಿಂದ ಗೊಬ್ಬರ ತಯಾರಾಗುತ್ತಿದೆ. ಭತ್ತದ ಪೊಟ್ಟಿನಿಂದ ಗೊಬ್ಬರ ತಯಾರಾಗುತ್ತಿದೆ. ಎಲೆಗಳಿಂದ ಗೊಬ್ಬರವನ್ನು ತಯಾರಿಸಲಾಗುತ್ತಿದೆ. ಕಸದಿಂದ ತಯಾರಿಸಲಾಗುತ್ತಿದೆ ಅದುದರಿಂದ ನಮಗೆ ಸಿಗತಕ್ಕ ಪ್ರತಿಯೊಂದು ಪದಾರ್ಥವನ್ನು ಶೇಖರಿಸಿ ಕಾಂಪೋಸ್ಟ್ ಪಿಟ್ ಮಾಡಿ ಪ್ರತಿಯೊಂದು ಗ್ರಾಮದಲ್ಲೂ ಕೂಡ ಅದು ದೊರೆಯುವಂತೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ವ್ಯವಸಾಯ ಇಲಾಖೆ ಚೆನ್ನಾಗಿ ಕೆಲಸ ಮಾಡಬೇಕಾದರೆ ಅನಿಮಲ್ ಹಸ್ಬೆಂಡರಿ ಇಲಾಖೆಗೂ ಇದಕ್ಕೂ ನಿಕಟ ಸಂಪರ್ಕವಿರ್ಪಡಬೇಕು. ಪಶುಸಂಗೋಪನೆ ಇಲಾಖೆಯನ್ನು ಬೆಳೆಸಬೇಕು.

ಚೇರ್ಮನ್ (ಶ್ರೀ ಎಂ. ಸಿ. ನಾಣಯ್ಯನವರು ಅಧ್ಯಕ್ಷಪೀಠವನ್ನಲಂಕರಿಸಿದರು).

ಸರ್ಕಾರದವರು ಎಷ್ಟು ರೀಸರ್ಚ್‌ಗಳನ್ನು ಮಾಡಿದರೂ ಕೂಡ ನೇಗಿಲ ಬದಲಾಗಿ ಬೇರೆ ವಸ್ತುವನ್ನು ಕಂಡುಹಿಡಿಯಲಾಗಲಿಲ್ಲ. ಯುಗ ಯುಗಗಳಿಂದ ಮರದ ನೇಗಿಲ ಬದಲಾಗಿ ಬೇರೆ ವಸ್ತು ಕಂಡುಹಿಡಿದಿಲ್ಲ. ಈಗೇನೋ ಮರದ ನೇಗಿಲ ಬದಲು ಕಬ್ಬಿಣದ ನೇಗಿಲನ್ನು ಉಪಯೋಗಿಸಿ ಎಂದು ಹೇಳಿದ್ದಾರೆ. ಅಷ್ಟೇ ವಿನಹ ಬೇರೆನೂ ಆಗಿಲ್ಲ. ಇವತ್ತು ಗಾಡಿಗೆ ಕಟ್ಟಲು ಎರಡು ಎತ್ತುಗಳು ಬೇಕು. ಒಂದು ಎತ್ತನ್ನು ಕಟ್ಟುವಂತಹ ವಿನಾದರೂ ಕಾರ್ಯವನ್ನು ಕಂಡುಹಿಡಿದಿದ್ದಾರೆಯೇ ? ಓಬೀರಾಯನ ಕಾಲದ ಪದ್ಧತಿಯೆ ವ್ಯವಸಾಯವೇ ಇಂದು ನಡೆಯುತ್ತಿವೆ. ಇವತ್ತು ನಾಟಿ ಮಾಡಬೇಕಾಗುತ್ತದೆ. ಕಳೆ ಕೀಳಬೇಕಾಗುತ್ತದೆ. ನೊಗ ಹೊರಬೇಕಾಗುತ್ತದೆ. ಈ ಸಮಸ್ಯೆಗಳಿಗೆಲ್ಲಾ ಪರಿಹಾರ ರೂಪವಾಗಿ ಬೇರೆ ವಿನನ್ನೂ ಕಂಡುಹಿಡಿದಿಲ್ಲ. ಈ ಕೆಲಸಗಳೆಲ್ಲಾ ನೋಡುವುದಕ್ಕೆ ಸುಲಭವಾಗಿ ಕಂಡರೂ ಮಾಡುವುದಕ್ಕೆ ಬಹಳ ಕಷ್ಟ ಇದೆ. ನೂರಾರು ವರ್ಷಗಳ ಹಿಂದೆ ಅನುಸರಿಸುತ್ತಿದ್ದ ಪದ್ಧತಿಯನ್ನೇ ಇಂದು ಅನುಸರಿಸುತ್ತಿದ್ದಾರೆ. ಹಿಂದಿನ ವರ್ಷಗಳಿಗೆ ಹೋಲಿಸಿದರೆ ಇಂದು ಜಲಗಳ ಧಾರಣೆ ನೂರರಷ್ಟು ಜಾಸ್ತಿಯಾಗಿದೆ. ರೀಸರ್ಚ್ ವೈಂಡ್ ನಿಮ್ಮಲ್ಲಿ ಇಲ್ಲ. ಪ್ರಾರಂಭದ ಕಾಲದಲ್ಲಿ ವಿನು ಗೊಬ್ಬರವನ್ನು ಉಪಯೋಗಿಸುತ್ತಿದ್ದೆವೋ ಅದೇ ಗೊಬ್ಬರವನ್ನು ಈಗಲೂ ಉಪಯೋಗಿಸುತ್ತಿದ್ದಾರೆ. ಆದ್ದರಿಂದ ಇವತ್ತು ಆ ಗೊಬ್ಬರಕ್ಕೆ ಬದಲಾಗಿ ಹೆಚ್ಚು ಉತ್ಪತ್ತಿ ಕೊಡತಕ್ಕ ಗೊಬ್ಬರವನ್ನು ಉಪಯೋಗಿಸಬೇಕು. ಇವತ್ತು ರೈತ ಉಪಯೋಗಿಸತಕ್ಕ ಸಾಮಾನು

ಗಳ ಬೆಲೆ ಇವತ್ತು ಬಹಳ ಜಾಸ್ತಿಯಾಗಿದೆ. ಇವತ್ತು ಕಬ್ಬಿಣದ ಬೆಲೆ ಗಗನಕ್ಕೇರಿದೆ. ಈ ಬೆಲೆ ಏರಿಕೆಗೆ ಕಾರಣರು ನೀವೇ ಎಂದು ತಾವು ಹೇಳುತ್ತೀರಿ. ಹಿಂದೆ ಒಂದು ಎತ್ತಿನ ಗಾಡಿಯ ಚಕ್ರವನ್ನು ತಯಾರಿ ಸಲು ಅದಕ್ಕೆ ಸಲೆ ಒಂದಕ್ಕೆ ೨೦–೩೦ ರೂಪಾಯಿಯಷ್ಟು ಮಾತ್ರ ಬೇಕಾಗುತ್ತಿತ್ತು. ಆದರೆ ಇವತ್ತು ಅದಕ್ಕೆ ೧೫೦ ರೂಪಾಯಿ ಕೊಡಬೇಕಾಗುತ್ತದೆ. ಇವತ್ತು ಒಂದು ಗಾಡಿಯ ಬೆಲೆ ೧,೫೦೦ ರೂಪಾಯಿ ಇದೆ. ಇತ್ತೀಚೆಗೆ ಟ್ರಿಕ್ಟರ್ ಗಾಡಿಯೆಂದು ಏನು ತಯಾರಿಸಲಾಗಿದೆ ಅದರ ಬೆಲೆ ೩,೦೦೦ ರೂಪಾಯಿ ಆಗುತ್ತದೆ. ಇವತ್ತು ಯಾವ ರೈತ ೩,೦೦೦ ರೂಪಾಯಿ ಕ್ಯಾಷ್ ಇಟ್ಟುಕೊಂಡು ಈ ಟ್ರಿಕ್ಟರ್ ಗಾಡಿಗಳನ್ನು ತೆಗೆದು ಕೊಳ್ಳುತ್ತಾನೆ ಅಮ ಇವತ್ತು ಸಾಧ್ಯವಾಗದ ಮಾತು. ಅದನು ಇವತ್ತು ಸೊಸೈಟಿಗಳಿಂದ ಇಷ್ಟೊಂದು ದುಡ್ಡು ತೆಗೆದು ಸಾಲ ತೀರಿಸಲು ಸಾಧ್ಯವಾಗುವುದಿಲ್ಲ. ಇದನ ರಿಸರ್ಚ್ ಮಾಡಬೇಕಾಗಿದೆಯೆಂದು ಕೇಳಿಕೊಳ್ಳುತ್ತೇನೆ. ಇವತ್ತು ಒಂದು ಸಬ್ಜೆಕ್ಟ್ ಇಟ್ಟುಕೊಂಡು ಅದರ ಬಗ್ಗೆ ಅಧ್ಯಯನ ನಡೆಸಬೇಕು. ಅದರ ಮೇಲೆ ಪ್ರಯತ್ನ ನಡೆಸಿದರೆ ನಮ್ಮ ದೇಶ ಉದ್ಧಾರವಾಗುತ್ತದೆ, ಇದರ ಬಗ್ಗೆ ಗಮನ ಕೊಡ ಬೇಕೆಂದು ನಾನು ಸಲಹೆ ಮಾಡುತ್ತೇನೆ. ಇವತ್ತು ರೈತ ಉಪಯೋಗಿಸಶಕ್ಕ ಎತ್ತಿನ ಗಾಡಿಯನ್ನ ಸರ್ಕಾರದವರು ಕಾಡಿನಲ್ಲಿ ಜೇರಳವಾಗಿ ದೊರೆಯುವ ಮರದಿಂದ ತಯಾರಿಸಿ ರೈತರಿಗೆ ೫೦% ರಿಯಾಯಿತಿ ಬೆಲೆಯಲ್ಲಿ ಮಾರುವುದರಿಂದ ಅನುಕೂಲವಿದೆ. ಇವತ್ತು ಯಾವ ರೈತನೂ ಗಾಡಿಗಳನ್ನು ದೂರುವುದಕ್ಕೆ ಹೋಗುವುದಿಲ್ಲ. ತನ್ನ ಸ್ವಂತ ಸಾಗುವಳಿಗಾಗಿ ಉಪಯೋಗಿಸುತ್ತಾನೆ. ಈ ರೀತಿ ಮಾಡುವುದರಿಂದ ಕೆಲಸ ಇಲ್ಲದ ಬಡಗಿಗಳಿಗೂ ಕೆಲಸ ಸಿಕ್ಕಿದಂತಾಗುತ್ತದೆ. ಪ್ರತಿಯೊಂದು ಜಿಲ್ಲೆಯಲ್ಲಿಯೂ ಕೂಡ ಇಂತಹ ಒಂದೊಂದು ಕೇಂದ್ರವನ್ನು ತೆರೆಯಬೇಕೆಂದು ಕೇಳಿಕೊಳ್ಳುತ್ತೇನೆ. ಇವುಗಳ ಮೂಲಕ ರೈತನಿಗೆ ಬೇಕಾದ ನೊಗ, ಗುದ್ದಲಿ, ಪಿಕಾಸಿ, ನೇಗಿಲುಗಳನ್ನೂ ಸಹ ರಿಯಾಯಿತಿ ಬೆಲೆಯಲ್ಲಿ ಕೊಡುವುದಕ್ಕೆ ಯೋಜನೆ ಯನ್ನು ಹಾಕಿಕೊಳ್ಳಬೇಕೆಂದು ಹೇಳುತ್ತೇನೆ. ಒಂದು ವೇಳೆ ಸಣ್ಣ ಸಣ್ಣ ಕೂಲಿಗಾರರು ಹಾಗೂ ಸಣ್ಣ ರೈತ ರೇನಿದ್ದಾರೆ ಅವರು ಈ ವ್ಯವಸಾಯದ ವಸ್ತುಗಳನ್ನು ಕೊಂಡುಕೊಳ್ಳಲು ಶಕ್ತಿಯಿಲ್ಲದ ಪಕ್ಷದಲ್ಲಿ ಅವರಿಗೆ ಇವುಗಳನ್ನು ಮುಂಷತ್ತಾಗಿ ಕೊಡಿ ಆದರಿಂದೇನೂ ಸರ್ಕಾರಕ್ಕೆ ಲುಕ್ಸಾನಾಗುವುದಿಲ್ಲ. ಇವತ್ತು ಸರ್ಕಾರದಲ್ಲಿ ಕೋಟ್ಯಾಂತರ ರೂಪಾಯಿ ಸೊರಿಹೋಗುತ್ತಿದೆ. ಈ ಬಡವರಿಗೆ ಈ ರೂಪಾಯಿಯಷ್ಟು ಪಿಕಾಸಿ, ೧೦ ರೂ. ಪಾಯಿಯ ನೊಗವನ್ನು ಮುಂಷತ್ತಾಗಿ ಕೊಟ್ಟ ಪಕ್ಷದಲ್ಲಿ ಸರ್ಕಾರಕ್ಕೂ ಒಳ್ಳೆಯ ಹೆಸರು ಬರುವುದರಲ್ಲಿ ಸಂದೇಹವಿಲ್ಲ. ಆದ್ದರಿಂದ ಪ್ರತಿಯೊಂದು ಜಿಲ್ಲೆಯಲ್ಲಿಯೂ ಕೂಡ ಇಂತಹ ಒಂದೊಂದು ಕೇಂದ್ರಗಳನ್ನು ಸ್ಥಾಪನೆ ಮಾಡಬೇಕು. ಇದಾದ ಮೇಲೆ ಕೋ ಆಪರೇಟಿವ್ ಸೊಸೈಟಿಗಳ ಮುಖಾಂತರ ರಿಯಾಯಿತಿ ಬೆಲೆಯಲ್ಲಿ ಈ ವ್ಯವಸಾಯದ ಉಪಕರಣಗಳನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡಿದ ಪಕ್ಷದಲ್ಲಿ ಅದರಿಂದ ರೈತರಿಗೆ ಬಹಳ ಸಹಾಯವಾಗುತ್ತದೆ.

ಮತ್ತೊಂದು ಸಲಹೆ ಏನೆಂದರೆ ಇವತ್ತು ನಮ್ಮ ರಾಜ್ಯದಲ್ಲಿ ೨,೬೭ ೦೦೦, ಪಂಪು ಸೆಟ್ಟುಗಳು ಇವೆ. ಇವತ್ತು ಅವು ಕೆಟ್ಟುಹೋದರೆ ರಿಪೇರಿ ಮಾಡಲು ಮೆಕ್ಯಾನಿಕ್‌ಗಳು ಇರುವುದಿಲ್ಲ. ಇದರಿಂದ ಸಾವಿರಾರು ರೂಪಾಯಿಗಳು ರೈತನಿಗೆ ನಷ್ಟವಾಗುತ್ತಿದೆ. ಇವತ್ತು ನಾನು ಕಣ್ಣಾರೆ ಕಂಡ ವಿಷಯವನ್ನು ಹೇಳು ತ್ತಿದ್ದೇನೆ. ಒಂದು ಪಂಪುಸೆಟ್ಟು ಕೆಟ್ಟರೆ ಅದನ್ನು ರಿಪೇರಿ ಮಾಡಿಸಲು ಬೆಂಗಳೂರಿಗೋ, ಮೈಸೂರಿಗೋ ಹೊತ್ತುಕೊಂಡು ಬರಬೇಕಾದ ಪರಿಸ್ಥಿತಿ ಇದೆ. ಆದ್ದರಿಂದ, ಇವತ್ತು ತಾವು ಪ್ರತಿಯೊಂದು ಜಿಲ್ಲಾ ಕೇಂದ್ರಗಳಲ್ಲೂ ಕೂಡ ಒಂದೊಂದು ವರ್ಕ್‌ಷಾಪ್‌ಗಳನ್ನು ಪ್ರಾರಂಭ ಮಾಡಬೇಕು. ಇವತ್ತು ಪ್ರತಿ ಯೊಂದು ಜಿಲ್ಲಾ ಕೇಂದ್ರದಲ್ಲಿ ಕಾಲೇಜು ಕಟ್ಟುವ ಬದಲು, ಯೂನಿವರ್ಸಿಟಿಗಳನ್ನು ನಿರ್ಮಿಸುವ ಬದಲು ಇಂತಹ ಒಂದೊಂದು ಇಂಡಸ್ಟ್ರಿಯಲ್ ಸೆಂಟರ್‌ಗಳನ್ನು ತೆಗೆಯಿರಿ. ಇವತ್ತು ೬೨ ಕೋಟಿ ಜನಗಳಿಗೆ ಬೇಕಾದ ಸೌಕರ್ಯವನ್ನು ಒದಗಿಸಿಕೊಡತಕ್ಕ ಜವಾಬ್ದಾರಿ ಈ ಒಂದು ಇಲಾಖೆಗೆ ಇದೆ. ಇವತ್ತು ಇಂಡಸ್ಟ್ರಿ ಯಲ್ ಸೆಂಟರ್ ಸ್ಥಾಪಿಸುವುದರಿಂದ ಫಿಟ್ಟರ್ಸ್ ಬೇಕಾಗುತ್ತದೆ ; ಟರ್ನರ್ಸ್ ಬೇಕಾಗುತ್ತದೆ ; ಕಾರ್ಪೆಂಟರ್ಸ್ ಬೇಕಾಗುತ್ತದೆ. ಹಾಗೂ ಪಂಪ್‌ಸೆಟ್ ರಿಪೇರರ್ಸ್ ಬೇಕಾಗುತ್ತದೆ. ಇದರಿಂದಾಗಿ ಈ ಕೆಲಸಗಳಲ್ಲಿ ಪರಿಣತಿ ಹೊಂದಿರುವ ನಿರುದ್ಯೋಗಿಗಳಿಗೆ ಉದ್ಯೋಗ ದೊರೆತು, ರೈತರಿಗೂ ಬಹಳ ಅನುಕೂಲವಾಗು ತ್ತದೆಂದು ಹೇಳಬಯಸುತ್ತೇನೆ. ಪಂಪ್‌ಸೆಟ್‌ಗಳನ್ನು ಹೊತ್ತು ದೂರದ ಪಟ್ಟಣಗಳಿಗೆ ತಿರುಗುವುದು ತಪ್ಪುತ್ತದೆ. ಇದರಿಂದಾಗಿ ಒಂದೊಂದು ಡಿಸ್ಟ್ರಿಕ್ಟ್‌ನಲ್ಲೂ ಒಂದೊಂದು ಟ್ರೈನಿಂಗ್ ಸೆಂಟರ್‌ಗಳನ್ನು ಸ್ಥಾಪಿಸಬೇಕೆಂದು ಸೂಚಿಸಬಯಸುತ್ತೇನೆ. ಈ ಟ್ರೈನಿಂಗ್ ಸೆಂಟರುಗಳಿಗೆ ಇವತ್ತು ಡಿಗ್ರಿ ಪಾಸಾಗಿ ಕೆಲಸವಿಲ್ಲದೆ ಅಲೆಯುತ್ತಿರುವ ನಿರುದ್ಯೋಗಿಗಳಿಗೆ ಸವಲತ್ತುಮಾಡಿಕೊಡಬೇಕೆಂದು ಹೇಳಬಯಸುತ್ತೇನೆ. ಇದ ರಿಂದಾಗಿ ಆ ವಿದ್ಯಾರ್ಥಿಗಳು ತಮ್ಮ ಕಾಲಮೇಲೆ ನಿಂತು ಜೀವನ ನಡೆಸುವಂತಹ ಟ್ರೈನಿಂಗ್ ಪಡೆಯುವು.

ದಕ್ಕೆ ಅವಕಾಶವಾಗುತ್ತದೆ. ಈ ರೀತಿಯ ಪಾಶ್ಚಾತ್ಯ ವಿಧಾನದ ಟ್ರೈನಿಂಗ್ ಪದ್ಧತಿಯನ್ನು ಜಾರಿಗೆ ತಂದರೆ ದೇಶದ ನಿರುದ್ಯೋಗ ಸಮಸ್ಯೆಯನ್ನು ಎಷ್ಟೋ ಬಗೆಹರಿಸಿದಂತಾಗುತ್ತದೆ.

SRI K. H. RANGANATH.—Now-a-days they are more crazy about Universities ; crazy about sophisticated research and all those things. Why don't you influence the party ?

SRI M. V. RAJASHEKARAN.—We have to undo the things which had been done for so many years. Unless we do that, we do not think we will deliver the goods to the rural people.

ಶ್ರೀ ವೈ. ರಾಮಕೃಷ್ಣ.—ಬಹುಶಃ ಕೇಂದ್ರದಲ್ಲಿ ಈ ಸರ್ಕಾರ ಬಂದಮೇಲೆ ವ್ಯವಸಾಯದ ಪ್ರಗತಿಗೆ ಎಷ್ಟು ಬೂಸ್ಟ್ ಸಿಗುತ್ತಾ ಇದೆ ಎಂದು ನಾನು ಹೇಳಬೇಕಾದ್ದಿಲ್ಲ. ನೀವೂ ಒಪ್ಪಿಕೊಳ್ಳುತ್ತೀರಿ ; ಒಪ್ಪಿ ಕೊಳ್ಳದೇಹೋದರೆ ಇದನ್ನು ರಾಜಕೀಯ ಕನ್ನಡಿಯಿಂದ ನೋಡುತ್ತಿದ್ದೀರಿ ಎಂದು ವಿಧಿಯಿಲ್ಲದೆ ನಾನು ಹೇಳಬೇಕಾಗುತ್ತದೆ. ನೀವು ಒಬ್ಬಿಯವರು ರಾಜಕೀಯ ಕನ್ನಡಿಯಿಂದ ವಿಷಯಗಳನ್ನು ನೋಡುವುದಿಲ್ಲ. ನನ್ನ ಪತ್ತಿರ ಮಾಹಿತಿ ಇದೆ. ಉದಾಹರಣೆ ಕೊಡಿ ಎಂದರೆ ಕೊಡುತ್ತೇನೆ.

SRI K. H. RANGANATH.—I just casually got 'Southern Economics' ಅದರಲ್ಲಿ Janata Party politics irrelevance ಎಂದು ಆರ್ಟಿಕಲ್ ಇದೆ, ಅದನ್ನು ನಾನು ಓದುತ್ತಾ ಇದ್ದೆ. ರ ಜಕೀಯ ಕನ್ನಡಿಯಿಂದ ನೋಡುವುದು ಬೇಕಾಗಿಲ್ಲ. ವ್ಯವಸಾಯದ ಬಗ್ಗೆ ಮಾತ ನಾಡುವಾಗ ರಾಜಕೀಯ ಬೆರಸಿ ಮಾತನಾಡುವುದು ಸರಿಯಲ್ಲ ಎನ್ನುವವರಲ್ಲಿ ನಾನೂ ಒಬ್ಬ.

ಶ್ರೀ ವೈ. ರಾಮಕೃಷ್ಣ.—ನಾನು ಭಾಷಣ ಮಾಡುವಾಗ ನಗುತ್ತಿದ್ದೀರಿ, ಅದರಿಂದ ನನಗೆ ಆರೀತಿ ಅರ್ಥವಾಗುತ್ತದೆ. ಎಂಪ್ಲಾಯ್‌ಮೆಂಟ್ ಕೊಡತಕ್ಕ ಜವಾಬ್ದಾರಿ ತಮ್ಮದೂ ಇದೆ, ಅದನ್ನು ತಾವೂ ಒಪ್ಪಿದ್ದೀರಿ. ಪಿ.ಯು.ಸಿ. ಪಾಸ್ ಮಾಡಿದವರಿಗೆ ಆರ್ಟ್ಸ್ ಕಾಲೇಜಿಗೆ ಹೋಗಿ ಚರಿತ್ರೆ ಓದಿ ಎಂದು ಹೇಳು ವುದರ ಬದಲು ತಾಲ್ಲೂಕು, ತಾಲ್ಲೂಕುಗಳಲ್ಲಿ ಇಂತಹ ಕೇಂದ್ರಗಳನ್ನು ತೆಗೆಯಿರಿ. ಈಗ ನನಗೆ ಫಿಟ್ಟರ್ ಬೇಕು, ನನ್ನ ಮಿಷನ್ ಕೆಟ್ಟುಹೋಗಿದೆ. ಅದರ ರಿಪೇರಿಗೆ ೧೦ ರೂಪಾಯಿ ಖರ್ಚಾಗುತ್ತದೆ; ೧೦ ರೂಪಾಯಿ ಖರ್ಚುಮಾಡಿ ರಿಪೇರಿ ಮಾಡಿಸಬೇಕಾದರೆ ಅದನ್ನು ಗಾಡಿಯಲ್ಲಿ ಹಾಕಿಕೊಂಡು ಹೋಗಿ ಬರು ವುದಕ್ಕೆ ೧೦೦ ರೂಪಾಯಿ ಆಗುತ್ತದೆ. ಇಷ್ಟು ಹಣವನ್ನು ಎಲ್ಲಿಂದ ತರುವುದು. Please give top most priority to this work.

ಇನ್ನು localisation of crop ಬಗ್ಗೆ ನಾನು ತಮಗೆ ಹೇಳಬೇಕಾದ್ದಿಲ್ಲ. ವ್ಯವಸಾಯ ಇಲಾಖೆಯವರು ಇದನ್ನು ಕಟ್ಟು ನಿಟ್ಟಾಗಿ ಜಾರಿಗೆ ತರಬೇಕು. ಯಾವ ಪ್ರದೇಶದಲ್ಲಿ ಯಾವ ಕಾಲದಲ್ಲಿ, ಯಾವ ಬೆಳೆಯನ್ನು ಬೆಳೆಯಬೇಕು ಎನ್ನುವುದನ್ನು ಕಡ್ಡಾಯವಾಗಿ ಮಾಡಿದರೆ ನಿಜವಾಗಲೂ ವ್ಯವಸಾಯ ದಲ್ಲಿ ಗಣನೀಯವಾದ ಪ್ರಗತಿಯನ್ನು ಸಾಧನೆ ಮಾಡಿದಂತಾಗುತ್ತದೆ. ನಾವು ಡಿಕ್ಟೇರ್ ಮಾಡುತ್ತೇವೆ, ರೈತರು ಕೇಳುವುದಿಲ್ಲ ಎನ್ನುವುದು ಸಾಮಾನ್ಯವಾಗಿ ಬರತಕ್ಕ ಕೂಗು. ಸ್ಕೂಲಿನಲ್ಲಿ ಮಕ್ಕಳಿಗೆ ಬ್ಲಾಕ್ ಬೋರ್ಡ್‌ಮೇಲೆ ಚಾಕ್‌ಪೀಸ್‌ನಿಂದ ಬರೆದು ಅವರ ಮನಸ್ಸಿಗೆ ಬರುವಂತೆ ಹೇಗೆ ತಿಳಿಸುತ್ತೇವೋ ಅದೇ ರೀತಿ ರೈತನ ಮನಸ್ಸಿಗೆ ಹೋಗತಕ್ಕ ರೀತಿಯಲ್ಲಿ ಮಾರ್ಗದರ್ಶನ ಮಾಡಬೇಕು. ವಿಲೇಜ್ ಲೆವೆಲ್‌ನಿಂದ ಹಿಡಿದು ಡೈರಕ್ಟರ್ ಆಫ್ ಆಗ್ರಿಕಲ್ಚರ್ ತನಕ ಈ ಕೆಲಸಮಾಡಬೇಕು. ಈ ಭೂಮಿಯಲ್ಲಿ ರಾಗಿ ಬೆಳೆಯುವು ದರ ಬದಲು ಕಡಲೆಕಾಯಿ ಬೆಳೆದರೆ ಹೆಚ್ಚು ಲಾಭ ಸಿಗುತ್ತದೆ, ಭೂಮಿ ಫಲವತ್ತಾಗುತ್ತದೆ, ಮುಂದಿನ ಬೆಳೆ ಚೆನ್ನಾಗಿ ಬರುತ್ತದೆ ಎಂದು ಹೇಳಬೇಕು. ನಮ್ಮ ರೈತರು ಬುದ್ಧಿವಂತರು, ದಡ್ಡರಲ್ಲ, ಅವರ ಮನಸ್ಸಿಗೆ ನಾಟಿತು ಎಂದರೇ, ಏನು ಕೆಲಸಮಾಡಬೇಕು ಎಂದರೂ ಮಾಡುತ್ತಾರೆ. ಇದನ್ನು ತಮಿಳುನಾಡಿನಲ್ಲಿ ರೈತರು ಅರಿತಿದ್ದಾರೆ. ಒಂದು ಸಲ ಅವರಿಗೆ ಹೇಳಿದರೆ ಹೇಗೆ ಮಾಡಬೇಕು ಎನ್ನುವುದು ಅವರಿಗೆ ಗೊತ್ತಿದೆ. ಯಾವ ಬೆಳೆ ಹೆಚ್ಚಾಗಿ ಹಣ ತಂದುಕೊಡುತ್ತದೆ ಎನ್ನುವುದರ ಬಗ್ಗೆ ಅವರಿಗೆ ಜ್ಞಾನವನ್ನು ಮಾಡತಕ್ಕ ಪ್ರಯೋಗ ಗಳನ್ನು, ಉಪನ್ಯಾಸಗಳನ್ನೂ ಮತ್ತು ಎಕ್ಸಟೆನ್ಷನ್ ಎಜುಕೇಷನ್‌ನ್ನು ಅವರ ಮನೆ ಬಾಗಿಲಿಗೆ ಹೋಗಿ ಕೊಡಿಸಬೇಕು. ಪ್ರತಿಯೊಂದು ವಿಲೇಜ್ ಪಂಚಾಯಿತಿ ಲೆವೆಲ್‌ನಲ್ಲೂ ಕೂಡ ಪರಿಣತರನ್ನು ಕಳಿಸಿ, ಈ ವಿಚಾರದಲ್ಲಿ ಹೆಚ್ಚಿಗೆ ಮಾಹಿತಿ ಒದಗಿಸುವಂತೆ ಮಾಡಬೇಕು. ಲೋಕಲೈಸೇಷನ್ ಇನ್‌ಸಿಸ್ಟ್ ಮಾಡುತ್ತೀರಿ,

ಅದರಲ್ಲಿ ೫೦ ಪರ್ಸೆಂಟ್ ರೈತರು ಮನ್ನಣೆಕೊಡುತ್ತಾರೆ, ೫೦ ಪರ್ಸೆಂಟ್ ರೈತರು ಮನ್ನಣೆ ಮಾಡುವುದಿಲ್ಲ ಕಬ್ಬಿಗೆ ೧೫ ಅಥವಾ ೨೦ ದಿವಸಕ್ಕೆ ನೀರು ಕೊಡಬೇಕಾದಾಗ ಸುಮಾರು ಒಂದು ತಿಂಗಳು ನೀರು ಕೊಡದೆ ಬೆಳೆ ನಷ್ಟವಾದಾಗ ಯಾರು ಹೊಣೆಗಾರರು. ಈ ಹೊಣೆಯನ್ನು ಸರ್ಕಾರ ಹೊರುವುದಕ್ಕೆ ಸಿದ್ಧವಿದೆಯೇ. ಈ ವಿಚಾರದಲ್ಲಿ ರೈತರಿಗೆ ಉದ್ದೇಶಪೂರ್ವಕವಾಗಿ ನಷ್ಟ ಮಾಡುತ್ತಿದ್ದಾರೆ. ಕೆರೆ ಒಡೆದುಹೋಗಿದೆ ಎಂದರೆ ರಾತ್ರಿಹೊತ್ತು ಕೆಲಸಗಾರರನ್ನು ಇಟ್ಟು ಫುಟ್ ಲೈಟ್ ಇಟ್ಟುಕೊಂಡು ಕೆಲಸಮಾಡಿಸಿ, ಅವರಿಗೆ ಓವರ್ ಟೈಂ ಕೊಡಿ. ಲಕ್ಷಾಂತರ ರೂಪಾಯಿಗಳ ಬೆಳೆ ನಷ್ಟವಾಗುವ ಬದಲು ರಾತ್ರಿಹೊತ್ತು ಕೆಲಸಮಾಡಿಸಿ ೨೦ ದಿವಸಕ್ಕೆ ನೀರು ಬಿಡತಕ್ಕ ವ್ಯವಸ್ಥೆ ಮಾಡಬೇಕು. ಇವತ್ತು ನೀರಿಲ್ಲದೆ ಲಕ್ಷಾಂತರ ರೂಪಾಯಿಗಳ ಕ್ರಾಷ್ ನಷ್ಟವಾಗುತ್ತಾ ಇದೆ. ಇದೇರೀತಿ ಭತ್ತವೂ ಆಗಿದೆ. ನಾವು ಕಬ್ಬು ಹಾಕಿ ಎಂದರೆ ಇವರು ಕೇಳುವುದಿಲ್ಲ, ಭತ್ತ ಹಾಕುತ್ತಾರೆ ಎಂದು ಹೇಳುತ್ತಾರೆ. ಈ ರೀತಿ ಹೇಳುವುದು ಬೇಡ ಈ ನಿಯಮವನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಪಿ.ಡಬ್ಲ್ಯೂ.ಡಿ. ಅವರು ಕ್ಯಾಸ್ಸಲ್ ಏನು ಮಾಡುತ್ತಾರೆ ಅದಕ್ಕೆ ತಕ್ಕಷ್ಟು ಅಧಿಕಾರವನ್ನು ಕೈಯಲ್ಲಿಟ್ಟುಕೊಂಡು ಸಕಾಲದಲ್ಲಿ ನೀರು ಒದಗಿಸತಕ್ಕ ಏರ್ಪಾಡನ್ನು ಮಾಡದೇ ಹೋದರೆ ರೈತರಿಗೆ ಅವರು ಇಟ್ಟ ಬೆಳೆ ಖಂಡಿತವಾಗಿಯೂ ಅವರ ಕೈಗೆ ಸಿಕ್ಕುವುದಿಲ್ಲ ಎನ್ನುವುದನ್ನು ತಾವು ಮರೆಯಂಬಾರದು.

ಇನ್ನು ಉತ್ತಮವಾದ ಬೀಜಗಳು. ತಾವು ಸೀಡ್ ಕಾರ್ಪೊರೇಷನ್ ಮಾಡಿದ್ದೀರಿ, ತಮ್ಮಲ್ಲಿ ಬಹಳ ಕಾರ್ಪೊರೇಷನ್‌ಗಳಿವೆ. ತಮ್ಮ ಖಾತೆಯೊಳಗೆ ಇರುವಷ್ಟು ಕಾರ್ಪೊರೇಷನ್‌ಗಳು ಬೇರೆ ಯಾವ ಖಾತೆಯೊಳಗೂ ಇಲ್ಲ. ನಿಮ್ಮನ್ನು ಕಾರ್ಪೊರೇಷನ್ ಮಂತ್ರಿಗಳು ಎಂದು ಹೇಳಿದರೆ ತಪ್ಪಾಗುವುದಿಲ್ಲ. ಅವು ಯಾವ ರೀತಿ ಕೆಲಸಮಾಡುತ್ತಿವೆ ಏನ್ನುವುದುಗೊತ್ತಿದೆ.

ಶ್ರೀ ಕೆ. ಎಚ್. ರಂಗನಾಥ್.—ಕಾರ್ಪೊರೇಷನ್‌ಗಳು ಪ್ರಾರಂಭವಾದದ್ದು ತಮ್ಮ ಕಾಲದೊಳಗೆ.

ಶ್ರೀ ವೈ. ರಾಮಕೃಷ್ಣ.—ನಮ್ಮ ಕಾಲದಲ್ಲಿ ಹೀಗೆ ನಡೆಯುತ್ತಾ ಇರಲಿಲ್ಲ. ಈ ಪುಸ್ತಕವನ್ನು ಯಾರೋ ತಂದುಕೊಟ್ಟರು, ಇದರಲ್ಲಿ ನೋಡಿದರೆ ೫ ಕೋಟಿ ರೂಪಾಯಿ ಲುಕ್ಸಾನು ಆಗಿದೆ. ನಮ್ಮ ಕಾಲದಲ್ಲಿ ಕಾರ್ ಮಿಸ್‌ಯೂಸ್ ಆಗುತ್ತಿತ್ತು. You are also a Minister. You are also a Leader of the Scheduled Caste people.

ಇವತ್ತು ಕರ್ನಾಟಕ ರಾಜ್ಯದಲ್ಲಿ ಎಷ್ಟು ಕಾರ್ಪೊರೇಷನ್‌ಗಳು ಸರಿಯಾಗಿ ಕೆಲಸ ಮಾಡುತ್ತಾ ಇವೆ, ಯಾವ ಕಾರ್ಪೊರೇಷನ್ ಲಾಭದಾಯಕವಾಗಿ ಕೆಲಸಮಾಡುತ್ತಿದೆ ಎಂದು ಹೇಳುತ್ತೀರಾ ಇದಕ್ಕೆ ಏನು ಕಾರಣ ಎಂದರೆ, ಟೆಕ್ನೋಕ್ರಾಟ್ಸ್‌ನ್ನು ಛೇರ್ಮನ್‌ಗಳಾಗಿ ನೇಮಕ ಮಾಡುವುದಿಲ್ಲ. ನಿಮ್ಮ ಖಾತೆಯಲ್ಲಿ ಕಾನೂನನ್ನು ಆಳವಡಿಸಿದ್ದೀರಿ. ಸೀಡ್ಸ್‌ನಲ್ಲಿ ಎಕ್ಸ್‌ಪರ್ಟ್ ಆದಂಥವರನ್ನು ನೇಮಕ ಮಾಡಬೇಕು. ಆಗ್ರಿ ಕಲ್ಚರಲ್ ಯೂನಿವರ್ಸಿಟಿಯವರು ಹೇಳುತ್ತಾರೆ. ನೀವು ಮಾಡುತ್ತೀರಿ. ಆದರೆ ಬೇರೆ ಕಾರ್ಪೊರೇಷನ್‌ಗಳಲ್ಲಿ ಈ ರೀತಿ ಇಲ್ಲ. ಅದಕ್ಕೋಸ್ಕರ ನಾನು ಹೇಳುತ್ತಿದ್ದೇನೆ, ನೀವು ಸೀಡ್ಸನ್ನು ಕೊಂಡುಕೊಳ್ಳುವಾಗ ಬಹಳ ಎಚ್ಚರಿಕೆಯಿಂದ ಇರಬೇಕು.

SRI K. H. RANGANATH.—May I ask one question. I am happy that you have suggested for the appointment of technocrats as the Chairmen. Then, the other question that would arise is Reservation of Posts to the SC/STs. That question will naturally crop up. Then, are we to emphasis this or on the appointment of technocrats. ? Supposing if there is no man belonging to a particular section of community, then you must be prepared to meet the iventualities that would arise.

ಶ್ರೀ ವೈ. ರಾಮಕೃಷ್ಣ.—ತುಂಬಾ ಪಂದನೆಗಳು ಇವತ್ತು ತಮ್ಮಲ್ಲಿ ಕಳಕಳಿಯಿಂದ ಒಂದು ಪ್ರಶ್ನೆ ಕೇಳುತ್ತೇನೆ. ಇವತ್ತು ೭೦-೮೦ ಕಾರ್ಪೊರೇಷನ್‌ಗಳಿವೆ, ಅದರಲ್ಲಿ ಎಷ್ಟು ಜನ ಹರಿಜನರನ್ನು ಛೇರ್ಮನ್‌ಗಳಾಗಿ ನೇಮಕ ಮಾಡಿದ್ದೀರಿ?

SRI K. H. RANGANATH.—That is altogether a different question. The broad question that was now raised by the hon. Member Sri Ramakrishna was that the technocrats should be preferred and they be

appointed as the Chairman of the Corporations. If that is so, you should compromise and forget the other things. You should forgo the reservation for a particular community or for a particular sectionof people. Are you prepared for that compromise in the interest of this industry and in the interest of agriculturists

ಶ್ರೀ ಪೈ. ರಾಮಕೃಷ್ಣ.—ಅಲ್ಲಿ ಟೆಕ್ನೊಕ್ರಾಟ್‌ನ್ನು ಅಪಾಯಿಂಟ್ ಮಾಡಿ, ಅವರು ಸಿಗದಿದ್ದರೆ ಬೇರೆಯವರನ್ನು ಅಪಾಯಿಂಟ್ ಮಾಡಿ. ರುರ್ಬಲ ವರ್ಗದವರಲ್ಲಿ, ಹರಿಜನ ಗಿರಿಜನರಲ್ಲಿ ಸಿಗಂತ್ಹಾರೆಯೇ ಇಲ್ಲವೇ ಎನ್ನುವ ಬಗ್ಗೆ ನಾವು ಏನಾದರೂ ಸರ್ವೆ ಮಾಡಿದ್ದೀರಾ ಅದುದರಿಂದ ನಿಮ್ಮ ವಾದಕ್ಕೆ ಅರ್ಥ ವಿಲ್ಲ. ಈಗ ನೀವು ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನಲ್ಲಿ ಚೇರ್ಮನ್ ರೊಬ್ಬರನ್ನು ಹಾಕಿದ್ದೀರಿ ಅವರೇನು ಟೆಕ್ನೊಕ್ರಾಟ್ಸ್ ಆಗಿದ್ದಾರಾ ? ಆದುದರಿಂದ ತಾವು ಇನ್ನು ಮುಂದಾದರೂ ಅಪಾಯಿಂಟ್ ಮಾಡುವಾಗ ಟೆಕ್ನೊಕ್ರಾಟ್‌ನ್ನು ಹಾಕಿ.

SRI K. H. RANGANATH.—Sir, he was intiating a policy matter and saying that a technocrat should be preferred to generalist. Then I submitted through you, Sir, to the hon. Member whether he is prepared to make a compromise. In the absence of some people is he prepared to say that that appointment should go to anybody. When we are interested in an institution, in its prosperity and service to the general public, then we must be prepared to make this sacrifice. Is he prepared for that ? I would not have put this question if it were anybody other than Ramakrishna. If it were Sri Basappa I would not have put it to him, because tomorrow the Government should not be found fault with for preferring a technocrat overlooking the claims of Scheduled Castes/Scheduled Tribes, backward classes and others. So, let the hon. Member make himself quite clear whether he is prepared to make that sacrifice supposing Government were to prefer a technocrat to a generalist.

ಶ್ರೀ ಪೈ. ರಾಮಕೃಷ್ಣ.—ಸ್ವಾಮಿ ಟೆಕ್ನೊಕ್ರಾಟ್‌ನ್ನು ಅಪಾಯಿಂಟ್‌ಮೆಂಟ್ ಮಾಡುವುದರಲ್ಲಿ ನಾವು ದೇಶ ಭಕ್ತಿಯನ್ನು ಮೈಕ್ಕೆಪಡಿಸಬೇಕು. ಅವರು ಯಾವುದೇ ಜಾತಿಗಂಕ್ಕೆ ಸೇರಿದವರಾಗಿರಬಹುದು. ಇದನ್ನು ನಾನು ಬಿಡಿಸಿ ಹೇಳುತ್ತಿದ್ದೇನೆ. ದೇಶದಲ್ಲಿ ಉತ್ಪತ್ತಿ ಜಾಸ್ತಿಯಾಗಬೇಕು, ರಿಸರ್ಚ್ ಆಗಬೇಕು ಆದಮೇಲೆ ನಾವು ಬೇಕಾದರೆ ನಿಮ್ಮ ರಿಜರ್ವೇಷನ್‌ಗೆ ಫೈಟ್ ಮಾಡೋಣ. ಆದನ್ನು ಬಿಟ್ಟು ಟೆಕ್ನೊಕ್ರಾಟ್ಸ್ ಅಲ್ಲವೇ ಇರುವವರನ್ನು ಹಾಕಿದರೆ ಏನು ಪ್ರಯೋಜನ ? ಟೆಕ್ನೊಕ್ರಾಟ್ಸ್ ಹಾಕಿ ಆಮೇಲೆ ನಮ್ಮ ದೇಶಕ್ಕೆ, ಇಡೀ ನಮ್ಮ ಜನಾಂಗಕ್ಕೆ ಅನುಕೂಲವಾಗುವುದಾದರೆ ನಾವು ಸ್ಯಾಕ್ರಿಫೈಸ್ ಮಾಡುವುದಕ್ಕೆ ತಯಾರಾಗಿದ್ದೇವೆ.

ಶ್ರೀ ಕೆ. ಎಚ್. ರಂಗನಾಥ್.—ಹಾಗಿದ್ದರೆ ನಾನು ಅವರಿಗೆ ಅಭಿನಂದಿಸ ಬೇಕಾಗುತ್ತದೆ ಸ್ವಾಮಿ.

ಶ್ರೀ ಪೈ. ರಾಮಕೃಷ್ಣ.—ಇನ್ನು ಬೀಜಗಳ ವಿಚಾರವಾಗಿ ಹೇಳಬೇಕು ಎಂದರೆ ಈ ಬೀಜಗಳನ್ನು ಕೊಡುಪುಕೊಳ್ಳುವ ವಿಚಾರದಲ್ಲಿ ನಾನು ಸೀಡ್ ಪಾಲಿಸಿಯನ್ನು ಪಾಲಿಸುತ್ತಿದ್ದೇನೆ ಅದುಮ್ಖಿಯಾಗಿದೆ. ಈಗ ಉದಾಹರಣೆಗೆ ತರಲಕ್ಕೆ ಪತ್ತಿ ಇದೆ ಅದನ್ನು ಕೊಂಡುಕೊಳ್ಳುವಾಗ ಆಗಲೀ ಅಥವಾ ಇನ್ನೊಂದು ಪತ್ತಿಯನ್ನಾಗಲೀ ಅದನ್ನು ನಿಮ್ಮಿಂದ ಕೊಂಡುಕೊಂಡು ಹಾಕಿದನಂತರ ಅದು ಮುಟ್ಟುವ ಇಲ್ಲವೇ ಏನು ವ ಬಗ್ಗೆ ವಿಚಾರಣೆಮಾಡಬೇಕಾಗಿದೆ. ನೀವು ಕೊಟ್ಟ ಬೀಜಗಳೆಲ್ಲವೂ ಅವು ಶೇಖ್ಯುವಂಟ್ಟವ ಉತ್ಕೃಷ್ಟವಾದ ಬೀಜಗಳನ್ನು ಹೇಳಿ ಕೊಟ್ಟಿದ್ದೀರಿ. ಆದರಲ್ಲಿ ಕಡಿಮೆ ಪಕ್ಷ ನಾ ಪರ್ಸೆಂಟಾದರೂ ಸರಿಯಿಲ್ಲ ಎನ್ನುವ ಬಗ್ಗೆ ಒಪ್ಪಿಕೊಳ್ಳುತ್ತೀರಾ

SRI K. H. RANGANATH.—I have not received a single complaint in respect of the seeds that were supplied by us. Some of the concerns which have been smuggling seeds from other areas and somehow managing to sell them here, it is those seeds that have not germinated and the agriculturists who have purchased from those people are the sufferers. I have not received from any member of this House a single letter to the effect that the seed supplied by the department to him or in a particular constituency or in a particular village has not germinated.

ಶ್ರೀ ಭೀಮಣ್ಣ ಖಂಡ್ರೆ.—ಬೀದರ್ ಜಿಲ್ಲೆಯಲ್ಲಿ ೧೯೭೩-೭೪ ರಲ್ಲಿ ಒಂದು ಕೋಟಿ ರೂ. ಗಳ ಬೀಜವನ್ನು ಸಪ್ಲೈ ಮಾಡಿದ್ದೀರಿ, ಆ ಬೀಜದಲ್ಲಿ ೭೫ ಪರ್ಸೆಂಟ್ ಕೂಡ ಹುಟ್ಟಲಿಲ್ಲ ಅದರ ಬಗ್ಗೆ ರಿಕಾರ್ಡ್ ಇದೆ, ನಿಮ್ಮ ವಿಜಿಲೆನ್ಸ್ ಕಮಿಷನ್ ರವರ ರಿಪೋರ್ಟ್ ಇದೆ ಅದರ ಬಗ್ಗೆ ಏನು ಕಾರ್ಯ ಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ಸ್ಪಷ್ಟವಾಗಿ ಹೇಳಬೇಕು. ಒಬ್ಬ ಸದಸ್ಯರೂ ಇದರ ಬಗ್ಗೆ ಕೇಳಿಲ್ಲವೆಂದು ಹೇಳಿದಿರಿ ನಾವು ಇದರ ಬಗ್ಗೆ ಕಳೆದ ೪ ವರ್ಷಗಳ ಹಿಂದಿನಿಂದಲೂ ಹೇಳುತ್ತಿದ್ದೇವೆ. ಇದರ ಬಗ್ಗೆ ತಮಗೆ ನೂರಾರು ಜನ ಕೇಳಿಕೊಂಡಿದ್ದಾರೆ. ಅದರ ರಿಕಾರ್ಡ್ ಎಲ್ಲಾ ನಿಮ್ಮ ಅಧಿಕಾರಿಗಳ ಹತ್ತಿರವಿದೆ ಕೇಳಿ.

ಶ್ರೀ ವೈ. ರಾಮಕೃಷ್ಣ.—ಮಾನ್ಯ ಮಂತ್ರಿಗಳವರ ಗಮನಕ್ಕೆ ಇದು ಬಾರದೇ ಇದ್ದಿರಬಹುದು ಇಲ್ಲವೇ ಒಂದು ಕಾಗದವಾದರೂ ಬಾರದೇ ಇರಬಹುದು. ಆದರೆ ತಾವು ಉತ್ತರ ಕೊಡುವಾಗ ನಿಮ್ಮ ಅಧಿಕಾರಿಗಳನ್ನು ಕೇಳಿ ನಿಜವೇನು ಎಂಬುದನ್ನು ಅರಿತು ಉತ್ತರ ಕೊಡಿ.

ಶ್ರೀ ಕೆ. ಎಚ್. ರಂಗನಾಥ್.—ಅವರು ಹೇಳುವ ಕತೆಯೇ ಬೇರೆ.

ಶ್ರೀ ವೈ. ರಾಮಕೃಷ್ಣ.—ಅದು ಇರಲೀ, ತಾವು ಬೀಜಗಳನ್ನು ಕೊಡುತ್ತೀರಿ, ಆಯಿಲ್ ಸೀಡ್ಸ್ ಗಳನ್ನು ಕೊಡುತ್ತೀರಿ ಆದರ ಕಡೆಗೆ ವಿಶೇಷವಾದ ಗಮನವನ್ನು ಹರಿಸಿ, ವಿಶೇಷವಾದ ಗಮನವೆಂದರೆ ಸಬ್ಸಿಡಿ ಕೊಡಿ ಎಂದು ಕೇಳುತ್ತೇನೆ. ಸಬ್ಸಿಡಿ ಏತಕ್ಕೆ ಕೊಡಬೇಕೆಂದು ಹೇಳುತ್ತಿದ್ದೇನೆಂದರೆ ದೇಶದಲ್ಲಿ ಅವುಗಳ ಅಭಾವವಿರುವುದರಿಂದ ಆವು ಈಗ ಹೆಚ್ಚಾಗಿ ಬೇಕಾಗಿರುವುದರಿಂದ ಕಡ್ಡಾಯವಾಗಿ ನೀವು ಶೇಕಡ ೫೦ ರಷ್ಟಾದರೂ ಸಬ್ಸಿಡಿಯನ್ನು ಯಾರೇ ಆಗಿರಲಿ ಆವನು ಹಣವಂತರಾಗಿರಲಿ ಇಲ್ಲ ಬಡವ ರಾಗಿರಲಿಎಲ್ಲಾ ಬೆಳೆಯತಕ್ಕ ರೈತರಿಗೂ ಕೂಡ ಕೊಡಿ. ಇವತ್ತು ಯಾರೂ ಎಣ್ಣೆ ಬೀಜಗಳನ್ನು ಬೆಳೆಯು ವುದಕ್ಕೆ ತಯಾರು ಆಗಿದ್ದಾರೆ, ಕಾಳುಗಳನ್ನು ಬೆಳೆಯುವುದಕ್ಕೆ ಮುಂದೆ ಬರುತ್ತಾರೆ ಅಂಥವರಿಗೆ ಹೆಚ್ಚಿನ ಪ್ರೋತ್ಸಾಹ ಕೊಡಲು ಸಬ್ಸಿಡಿ ಕೊಡಿ ಎಂದು ಹೇಳುತ್ತೇನೆ.

ಇನ್ನು ಪ್ಲಾಂಟ್ ಪ್ರೊಟೆಕ್ಷನ್ ಬಗ್ಗೆ ಹೇಳುವುದಾದರೆ, ಸಸ್ಯ ಸಂರಕ್ಷಣೆಯ ಬಗ್ಗೆ ಸೈನ್ಸ್ ಏನಿದೆ ಅದು ಇನ್ನು ಆಷ್ಟು ನಮ್ಮಲ್ಲಿ ಮುಂದುವರಿದಿಲ್ಲ. ಇದನ್ನು ನಿಮ್ಮ ಅಧಿಕಾರಿಗಳಿಂದ ಸೈಂಟಿಫಿಕ್ ರಿಪ್ಲೈ ಪಡೆದು ತಮ್ಮ ಉತ್ತರದಲ್ಲಿ ಹೇಳಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಮಂತ್ರಿಗಳವರು ಏರ್‌ಪೋರ್ಟ್‌ಗೆ ಹೋಗಬೇಕಾಗಿದೆ ಆದುದರಿಂದ ಮಾನ್ಯ ಸದಸ್ಯರು ಇವತ್ತಿಗೆ ತಮ್ಮ ಭಾಷಣವನ್ನು ಮುಗಿಸಿ ಮತ್ತೆ ಪುನ: ನಾಳೆ ಮುಂದು ವರಿಸಿ ಸಭೆ ಇಲ್ಲಿಗೆ ಮುಂಗಿಸುವುದು ಒಳ್ಳೆಯದು ಸ್ವಾಮಿ.

ಚೇರ್ಮನ್‌ರವರು.—ಇನ್ನು ಐದು ನಿಮಿಷಕ್ಕೆ ಸರಿಯಾಗಿ ಒಂದು ಗಂಟೆಯಾಗುತ್ತದೆ ಆಗ ಮುಗಿಸಿ ಬಿಡೋಣ.

ಶ್ರೀ ವೈ. ರಾಮಕೃಷ್ಣ.—ಈ ವಿಭಾಗದಲ್ಲಿ ಹೆಚ್ಚಿನ ಪರಿಶ್ರಮ ಆಗತ್ಯವಿದೆ. ಕಾಯಿಲೆ ಎಲ್ಲಾ ಬೆಳೆಗಳಿಗೂ ಬರುತ್ತದೆ. ಎಲ್ಲಾ ತರಹದ ರೋಗಗಳೂ ಬರುತ್ತದೆ. ಬಂದಾಗ ಎಲ್ಲರೂ ಔಷಧಿಗಳನ್ನು ಹ್ಯಾಂಡ್ ಪಂಪ್‌ಗಳನ್ನು ರೆಡಿಯಾಗಿ ಇಟ್ಟುಕೊಂಡಿರುವುದಕ್ಕೆ ಸಾಧ್ಯವಿಲ್ಲ. ತಾವು ಹೇಳುತ್ತೀರಿ, ನಮ್ಮ ಡಿಪಾರ್ಟ್‌ಮೆಂಟಿನಲ್ಲಿಟ್ಟಿದೇವೆ ಅಲ್ಲಿಗೆ ಅರ್ಜಿ ಹಾಕಿದರೆ ಅವರು ಬಂದು ನೋಡಿ ಅದಕ್ಕೆ ಸಲಹೆ ಕೊಡುತ್ತಾರೆಂದು ತಾವು ಏನೋ ಹೇಳುತ್ತೀರಿ ಆದರೆ ಅದು ಪ್ರಾಕ್ಟಿಕಲ್ ಆಗಿ ಸಾಧ್ಯವಿಲ್ಲದ ಮಾತು. ಸಸಿ

ಗಳಿಗೆ ರೋಗಗಳು ಬರೆಯುವುದಕ್ಕೆ ಕಾರಣವೇನು. ಅವು ಪರಡದೇ ಇರುವುದಕ್ಕೆ ಎಂಥಾ ಔಷಧಿಯನ್ನು ಉಪಯೋಗಿಸಬೇಕು ಎನ್ನುವ ಬಗ್ಗೆ ಇನ್ನೂ ಸಂಟ್ರೈಫಿಕ್ ವೇಲ್ಲಿ ಸಂಶೋಧನೆ ನಡೆಯಬೇಕಾಗಿದೆ. ಈಗ ಮಾಡಿರತಕ್ಕದ್ದು ಏನೂ ಸಾಲದು, ಇವತ್ತು ಭತ್ತಕ್ಕೆ ಬರತಕ್ಕ ಬೆಂಕಿ ರೋಗವೇನಿದೆ ಅದನ್ನು ಕಂಟ್ರೋಲ್‌ಮಾಡುವುದಕ್ಕೇ ಆಗಿಲ್ಲ, ಅದೇ ರೀತಿ ಕೊಕ್ಕರೆ ರೋಗ ಆ ಮೇಲೆ ರಾಗಿಗೆ ಒಂದು ತರಹ ರೋಗ ಬರುತ್ತದೆ ಅದಕ್ಕೆಲ್ಲಾ ನಿಮ್ಮ ಇಲಾಖೆಯ ಸಂಶೋಧನಾ ವಿಭಾಗದವರು ಸರಿಯಾದ ಔಷಧಿಯನ್ನು ಇಲ್ಲಿಯವರೆಗೆ ಕಂಡು ಹಿಡಿಯುವುದಕ್ಕೆ ಆಗಿಲ್ಲ, ಅದಕ್ಕಾಗಿ ತಾವು ಇವತ್ತಿನ ದಿವಸ ಕೋಟ್ಯಾಂತರ ರೂಪಾಯಿಗಳನ್ನು ವಿಚ್ರ್ ಮಾಡುತ್ತಿದ್ದೀರಿ, ಆದರೆ ಆದರಿಂದ ಯಾವ ಪ್ರಯೋಜನವೂ ದೊರೆಯುತ್ತಿಲ್ಲ. ಅದಕ್ಕೆ ತಾವು ಎಲ್ಲಾ ಗ್ರಾಮಗಳಿಗೂ ದುಃಷ್ಟಾಗಿ ಒಂದೊಂದು ಹ್ಯಾಂಡ್ ಪಂಪನ್ನು ತಂದು ಕೊಟ್ಟು ಬಿಡಿ. ಹಾಗೆ ಮಾಡಿದರೆ ಅಂಥಾ ರೋಗಗಳು ಕಾಣಿಸಿಕೊಂಡ ಕೂಡಲೇ ಅವರು ಹ್ಯಾಂಡ್ ಪಂಪ್‌ಗಳಿಂದ ಔಷಧಿಯನ್ನು ಸಿಂಪಡಿಸಿ ತಡೆಗಟ್ಟುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಪ್ರತಿಯೊಂದು ಗ್ರಾಮ ಪಂಚಾಯಿತಿಯಲ್ಲೂ ಗ್ರಾಮ ಸೇವಕರ ಹತ್ತಿರ ಕೊಡುವ ಬಿಡಿ. ಆದರಿಂದ ಅವರು ಪ್ರಯೋಜನ ಪಡೆದುಕೊಳ್ಳಲಿ.

ಚೇರ್ಮನ್‌ರವರು.— ಳೆಯಾದುದರಿಂದ ಮಾನ್ಯ ಸದಸ್ಯರು ತಮ್ಮ ಭಾಷಣವನ್ನು ಸೋಮವಾರ ದಂದು ಮುಂದುವರಿಸಬಹುದು. ನಾಳೆ ನಾನ್ ಅಫಿಷಿಯಲ್ ಬಿಜಿನೆಸ್ ಇರುತ್ತದೆ, ನಾಳೆ ಬೆಳಿಗ್ಗೆ ೯-೦೦ ಗಂಟೆಗೆ ಸಭೆ ಪುನ: ಸೇರುವುದು. ಸಭೆ ಇವತ್ತಿಗೆ ಇಲ್ಲಿಗೆ ಮುಗಿಯಿತು.

The House adjourned at one of the Clock to meet again at nine of the Clock on Saturday, the 12th May 1979.